ದಾವಣಗೆರೆ ನಗರವಾಣಿ
ಸುವರ್ಣ ಮಹೋತ್ಸವ ವರ್ಷದಲ್ಲಿ
54 ನೇ ವರ್ಷಕ್ಕೆ ಪಾದಾರ್ಪಣೆ 1973-2026

ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಹಾವೇರಿ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಕನ್ನಡ ದೈನಿಕ

# ನಗರವಾಣಿ ದಾವಣಗೆರೆ

ಸಂಸ್ಥಾಪಕ ಸಂಪಾದಕರು: ಸಿ.ಕೇಶವಮೂರ್ತಿ ಪ್ರಧಾನ ಸಂಪಾದಕರು: ಡಾ|| ಸಿ.ಕೆ.ಜಯಂತ್ ಸಹ ಸಂಪಾದಕರು: ಬಿ.ಎನ್.ಮಲ್ಲೇಶ್

ಸಂಪುಟ: 54 ಸಂಚಿಕೆ: 130 DEVANGERE E nagaravani.com mail: dngrvani@gmail.com ರಿ.ನಂ.24916/73 KA/SK/DVG -012/2026-28 ಶನಿವಾರ, ಸೆಪ್ಟಂಬರ್ 12, 2026 ದೂರವಾಣಿ: 08192-254186 ಬೆಲೆ: 3.00 ರೂ. ಪುಟಗಳು-4



ರಾಣೆಬೆನ್ನೂರಿನಲ್ಲಿ ಪತ್ರಿಕೆಗೆ ಸಂಪರ್ಕಿಸಿ
ನಗರವಾಣಿ
ರಾಣೆಬೆನ್ನೂರಿನಲ್ಲಿ ಪತ್ರಿಕೆಗೆ ಹಾಗೂ ಜಾಹೀರಾತುಗಳಿಗೆ ಸಂಪರ್ಕಿಸಿ
ನಾಗರಾಜ್ ವಿ.ಹಾವನೂರು, ಪ್ರತಿನಿಧಿ
ಮೊಬೈಲ್: 9964063326


### ಸಾಣೆಹಳ್ಳಿ ಶ್ರೀಗಳ 'ನಗರವಾಣಿ' ಅಂಕಣ ಬರಹ ಕೃತಿಗಳ ಬಿಡುಗಡೆ

## ಸಮ ಸಮಾಜ ಸೃಷ್ಟಿಸುವಲ್ಲಿ ಈ ನೆಲದ ಆಶಾವಾದ ಡಾ. ಪಂಡಿತಾರಾಧ್ಯ ಶ್ರೀಗಳು: ಡಾ. ಪ್ರಶಾಂತ್ ನಾಯ್ಕ




ದಾವಣಗೆರೆ,ಸೆ.11 : "ನಾಡಿನಲ್ಲಿ ಸಮ ಸಮಾಜ ಸೃಷ್ಟಿಸುವಲ್ಲಿ ಸದ್ಯದ ಈ ನೆಲದ ಆಶಾವಾದ ಎಂದರೆ ಸಾಣೆಹಳ್ಳಿ ಡಾ. ಪಂಡಿತಾರಾಧ್ಯ ಶ್ರೀಗಳು" ಎಂದು ಕುವೆಂಪು ವಿ.ವಿ. ಪ್ರಾಧ್ಯಾಪಕರಾದ ಡಾ. ಪ್ರಶಾಂತ ನಾಯ್ಕ ಅಭಿಪ್ರಾಯಪಟ್ಟರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಸಾಣೇಹಳ್ಳಿಯ ಪಂಡಿತಾರಾಧ್ಯ ಶ್ರೀಗಳು 'ದಾವಣಗೆರೆ ನಗರವಾಣಿ' ಪತ್ರಿಕೆಯಲ್ಲಿ ಸತತ ಐದು ವರ್ಷಗಳ ಕಾಲ 'ಅರಿವು-ಮರೆವು' ಶೀರ್ಷಿಕೆಯಡಿ ಬರೆದ ವೈಚಾರಿಕ ಅಂಕಣಗಳನ್ನು ಒಟ್ಟುಗೂಡಿಸಿ ಸಿದ್ಧಪಡಿಸಲಾದ ನಾಲ್ಕು ಸಂಪುಟಗಳ 'ಅರಿವಿನ ಪರಿಧಿ' ಕೃತಿಯನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಶ್ರೀಗಳು ನುಡಿದಂತೆ ನಡೆದವರು, ವಚನಗಳ ಆಶಯದಂತೆ ಬದುಕಿದವರು. ಬರೀ ಉಪದೇಶ ನೀಡದೆ ವಿಚಾರವಾದದ ಪ್ರತಿಪಾದನೆಯನ್ನು ಗಟ್ಟಿ ಧ್ವನಿಯಲ್ಲಿ ಮಾಡುತ್ತಾ ಬಂದವರು ಎಂದ ಪ್ರಶಾಂತ್ ನಾಯ್ಕ, ವಚನ ಪರಂಪರೆ ಎಂಬುದು ಶ್ರೀಗಳ ಲೇಖನಗಳಲ್ಲಿ ಹರಿದು ಬಂದಿದೆ. ನಗರವಾಣಿ ಪತ್ರಿಕೆಯ ಅಂಕಣ ಬರಹ ಒಂದು ರೀತಿಯ ವೈಚಾರಿಕ ಚಳುವಳಿ ಇದ್ದ ಹಾಗೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

2ನೇ ಪುಟಕ್ಕೆ..........

### ಬಡವರು, ಮಧ್ಯಮ ವರ್ಗದವರ ನಿವೇಶನಕ್ಕೆ

## ಕರೂರಿನಲ್ಲಿ 200 ಎಕರೆ ಹೊಸ ಲೇಔಟ್ ಸಚಿವ ಮಲ್ಲಿಕಾರ್ಜುನ್ ಘೋಷಣೆ



ದಾವಣಗೆರೆ: ಜಿಲ್ಲೆಯ ಬಡವರು ಹಾಗೂ ಮಧ್ಯಮ ವರ್ಗದ ಜನರ ವಸತಿ ಅನುಕೂಲಕ್ಕಾಗಿ ಕರೂರಿನಲ್ಲಿ ಸುಮಾರು 200 ಎಕರೆ ಜಾಗದಲ್ಲಿ ಹೊಸ ಲೇಔಟ್ ನಿರ್ಮಿಸಲು ತೀರ್ಮಾನಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರೂರಿನ 200 ಎಕರೆ ಪ್ರದೇಶದಲ್ಲಿ ಸುಸಜ್ಜಿತ ಲೇಔಟ್ ನಿರ್ಮಿಸಿ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ನಿವೇಶನ ಕಲ್ಪಿಸಲಾಗುವುದು. ಸಚಿವರು ರೈತರ ಮೇಲೆ ರೇಗಾಡಿದ್ದಾರೆ ಎಂದು ಬಿಜೆಪಿ ನಡೆಸುತ್ತಿರುವ ಪ್ರತಿಭಟನೆ ಹಾಗೂ ಸುಳ್ಳು ಅಪ್ರಚಾರಕ್ಕೆ ಪ್ರತಿಕ್ರಿಯಿಸಿದ ಅವರು, ರೈತರನ್ನು ದಿಕ್ಕು ತಪ್ಪಿಸದೆ ವಾಸ್ತವ ಸಂಗತಿಗಳನ್ನು ತಿಳಿಸುವ ಕೆಲಸವಾಗಬೇಕು ಎಂದರು.

2ನೇ ಪುಟಕ್ಕೆ..........

## ಇಂದು ಅನ್‌ಮೋಲ್ ಸ್ಕೂಲ್‌ನಲ್ಲಿ ರಕ್ತದಾನ ಶಿಬಿರ

ದಾವಣಗೆರೆ: 12ರಶನಿವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ಸಮೀಪದ ಶಿರಮ ಗೊಂಡನಹಳ್ಳಿಯ ಅನ್‌ಮೋಲ್ ಪಬ್ಲಿಕ್ ಸ್ಕೂಲ್‌ನಲ್ಲಿ ದಾವಣಗೆರೆಯ ಭಾರತ ವಿಕಾಸ ಪರಿಷತ್, ಗೌತಮಶಾಖೆ, ಕರ್ನಾಟಕ ಹಿಮೊಫಿಲಿಯಾ ಸೊಸೈಟಿ ಲೈಫ್‌ಲೈನ್ ಕೇಂದ್ರ ಇವರ ಸಹಯೋಗದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ವನ್ನು ಹಮ್ಮಿಕೊಳ್ಳಲಾಗಿದೆ. ಈ ಶಿಬಿರದಲ್ಲಿ 100ಕ್ಕಿಂತ ಹೆಚ್ಚು ಜನರು ರಕ್ತದಾನ ಮಾಡಲಿದ್ದಾರೆ. ರಕ್ತದಾನವು ಶ್ರೇಷ್ಠದಾನ ಹಾಗೂ ಆರೋಗ್ಯಕರವಾಗಿದ್ದು, ಯಾರಾದರೂಆರೋಗ್ಯವಂತ ವ್ಯಕ್ತಿಗಳು ಸ್ವಯಂ ಪ್ರೇರಿತರಾಗಿ ಬಂದುರಕ್ತದಾನ ಮಾಡಬಹುದಾಗಿದೆ.ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಶಿಬಿರವನ್ನು ಯಶಸ್ವಿಗೊಳಿಸಬೇಕೆಂದು ಅನ್‌ಮೋಲ್ ಪಬ್ಲಿಕ್ ಸ್ಕೂಲ್‌ನ ಪ್ರಾಂಶುಪಾಲ ಕೊಟ್ರೇಶ್ ಕೋರಿದ್ದಾರೆ.

## ಲೋಕಾಯುಕ್ತ ನೂತನ ಎಸ್ಪಿ ಆಂಟನಿ



ದಾವಣಗೆರೆ: ಜಿಲ್ಲೆಯ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾಗಿ ಜೆ.ಕೆ. ಆಂಟನಿ ಅವರು ನೂತನವಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ಇಲ್ಲಿಯವರೆಗೆ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದ ಎಂ.ಎಸ್.ಕೌಲಾಪೂರೆ ಅವರು ವರ್ಗಾವಣೆಗೊಂಡ ಕಾರಣ ತೆರವಾದ ಸ್ಥಾನಕ್ಕೆ ಆಂಟನಿ ಜಾನ್ ಅವರನ್ನು ನೇಮಕಗೊಳಿಸಿ ಸರ್ಕಾರ ಆದೇಶಿಸಿತ್ತು. ಸರ್ಕಾರಿ ಇಲಾಖೆಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಸಾರ್ವಜನಿಕರ ಕುಂದುಕೊರತೆಗಳು, ಸರ್ಕಾರಿ ಕಚೇರಿಗಳಲ್ಲಿ ಕೆಲಸ-ಕಾರ್ಯಗಳ ವಿಳಂಬ ಹಾಗೂ ಸರ್ಕಾರಿ ಯೋಜನೆಗಳ ಅನುಷ್ಠಾನದಲ್ಲಿ ನಡೆಯುವ ಅಕ್ರಮಗಳ ಬಗ್ಗೆ ಸಾರ್ವಜನಿಕರು ಸೂಕ್ತ ದಾಖಲೆಗಳೊಂದಿಗೆ ಲೋಕಾಯುಕ್ತ ಕಚೇರಿಗೆ ದೂರು ನೀಡಬಹುದು. ಅಥವಾ ನೇರ ಸಂಪರ್ಕಕ್ಕಾಗಿ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು, ಮೊಬೈಲ್ ಸಂಖ್ಯೆ: 93640-62515ನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

## ಕೆಪಿಎಸ್‌ಸಿ; ಜ್ಞಾನೇಂದ್ರ, ಕನ್ನಾಳೆಗೆ ಇಡಿ ಗ್ರಿಲ್

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ ಪಶುವೈದ್ಯಾಧಿಕಾರಿಗಳ ನೇಮಕಾತಿ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ತನಿಖೆ ಮುಂದುವರೆಸಿರುವ ಬೆನ್ನಲ್ಲೇ ಇದೇ ಪ್ರಕರಣ ಸಂಬಂಧ ಜಾರಿ ನಿರ್ದೇಶನಾಲಯ ಅಧಿಕಾರಿಗಳು ತನಿಖೆ ಚುರುಕುಗೊಳಿಸಿದ್ದು, ಕೆಪಿಎಸ್‌ಸಿ ಪ್ರಕರಣದ ಪ್ರಮುಖ




ಆರೋಪಿಗಳಾದ ಮಧ್ಯವರ್ತಿ ಬಸವರಾಜ್ ಕನ್ನಾಳೆ ಮತ್ತು ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್‌ನನ್ನು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ. ನ್ಯಾಯಾಲಯದ ಅನುಮತಿ ಪಡೆದು ಇಂದು ಸಂಜೆ 5 ಗಂಟೆಯವರೆಗೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ಬಸವರಾಜ್ ಕನ್ನಾಳೆ ಮತ್ತು ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್‌ನನ್ನು ವಿಚಾರಣೆ ನಡೆಸಲಾಗುತ್ತಿದ್ದು,ಅಗತ್ಯ ಬಿದ್ದರೆ ಆರ್ಥಿಕ ಅಕ್ರಮಗಳ ತನಿಖೆಗಾಗಿ ಇಬ್ಬರನ್ನೂ ಬಾಡಿ ವಾರೆಂಟ್ ಆಧರಿಸಿ ಇಡಿ ತಮ್ಮ ಕಸ್ಟಡಿಗೆ ಪಡೆಯುವ ಸಾಧ್ಯತೆಯಿದೆ.

2ನೇ ಪುಟಕ್ಕೆ..........

## ಅಪಘಾತ: ಕಾನೂನು ವಿದ್ಯಾರ್ಥಿ ಸಾವು



ಹರಿಹರ: ನಗರದ ಹೈಸ್ಕೂಲ್ ಬಡಾವಣೆಯ ನಿವಾಸಿ ನಗರಸಭೆ ಮಾಜಿ ಅಧ್ಯಕ್ಷೆ ರಾಧಾ ಸಿ.ಎನ್. ಹುಲಗೇಶ್ ಮತ್ತು ಹಾಲುಮತ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಸಿ.ಎನ್. ಹುಲಗೇಶ್ ದಂಪತಿಗಳ ಪುತ್ರ ಸಿ.ಎಚ್.ರಾಕೇಶ್ (ಮುತ್ತು) (22) ರಸ್ತೆ ಅಪಘಾತದಲ್ಲಿ ಮರಣ ಹೊಂದಿದ್ದಾರೆ.

ದಾವಣಗೆರೆ ಆರ್.ಎಲ್. ಕಾನೂನು ಕಾಲೇಜಿನಲ್ಲಿ ಅಂತಿಮ ವರ್ಷದಲ್ಲಿ ಅಭ್ಯಾಸ ಮಾಡುತ್ತಿದ್ದ ರಾಕೇಶ್ ಸೆ.4 ರಂದು ಬೆಂಗಳೂರಿನಿಂದ ಬೈಕ್‌ನಲ್ಲಿ ಬರುವಾಗ ನಡೆದ ರಸ್ತೆ ಅಪಘಾತದಲ್ಲಿ ತಲೆಗೆ ಪೆಟ್ಟಾಗಿ ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಸೆ.11 ರಂದು ಸಂಜೆ ನಿಧನರಾದರು. ಸೆ.12 ರಂದು ಮಧ್ಯಾಹ್ನ 2ಕ್ಕೆ ನಗರದ ಹಿಂದೂ ರುದ್ರಭೂಮಿಯಲ್ಲಿ ಅಂತಿಮ ಸಂಸ್ಕಾರ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

## ಸೆ.13ಕ್ಕೆ 34ನೇ ರೈತ ಹುತಾತ್ಮರ ದಿನಾಚರಣೆ ಮಳೆಗಾಗಿ ಪ್ರಾರ್ಥನೆ: ಎನ್.ಜಿ.ಪುಟ್ಟಸ್ವಾಮಿ




ದಾವಣಗೆರೆ: ರೈತ ಹುತಾತ್ಮರ ಸ್ಮರಣಾರ್ಥ ಸಮಿತಿ ಹಾಗೂ ಜಿಲ್ಲೆಯ ರೈತಪರ ಸಂಘಟನೆಗಳ ಸಹಯೋಗದೊಂದಿಗೆ ದಿ.ಓಬೇನಹಳ್ಳಿ ಕಲ್ಲಿಂಗಪ್ಪ ಮತ್ತು ದಿ.ಸಿದ್ಧನೂರು ನಾಗರಾಜಚಾರ್ ಅವರ 34ನೇ ವರ್ಷದ ರೈತ ಹುತಾತ್ಮರ ದಿನಾಚರಣೆಯನ್ನು ಸೆ.13ರಂದು ಮಧ್ಯಾಹ್ನ 12 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಅಧ್ಯಕ್ಷ ಎನ್.ಜಿ.ಪುಟ್ಟಸ್ವಾಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 12ಗಂಟೆಗೆ ತಮ್ಮ ಅಧ್ಯಕ್ಷತೆಯಲ್ಲಿ ಹಾಗೂ ಸಮಿತಿಯ ಗೌರವಾಧ್ಯಕ್ಷ ಹೆಚ್.ನಂಜುಂಡಪ್ಪ ಅವರ ನೇತೃತ್ವದಲ್ಲಿ ದಾವಣಗೆರೆ ತಾಲೂಕಿನ ಆನಗೋಡು ಹತ್ತಿರದ ರಾಷ್ಟ್ರೀಯ ಹೆದ್ದಾರಿ 48ರಲ್ಲಿರುವ ಉಳಪನಕಟ್ಟೆ ಕ್ರಾಸ್‌ನ ರೈತ ಹುತಾತ್ಮರ ಸಮಾಧಿ ಆವರಣದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ, ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ, ಮುಜರಾಯಿ ಸಚಿವ ಕೆ.ಎಸ್.ಬಸವಂತಪ್ಪ ಹಾಗೂ ಶಾಸಕ ಸಮರ್ಥ ಶಾಮನೂರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಇದರೊಂದಿಗೆ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಜಿಲ್ಲಾ ಪೊಲೀಸ್ ಅಧೀಕ್ಷಕ ಶೇಖರ್ ಹೆಚ್.ಟಿ., ಜಿ.ಪಂ. ಸಿಇಒ ಸಾಹಿತ್ಯ ಎಂ.ಆಲದಕಟ್ಟಿ, ಉಪ ಕಾರ್ಯದರ್ಶಿ ಮಮತ ಹೊಸಗೌಡರ್, ಉಪವಿಭಾಗಾಧಿಕಾರಿ ಸಂತೋಷ್ ಕುಮಾರ್ ಹಾಗೂ ತಹಶೀಲ್ದಾರ್ ಸಿ.ರಾಜೇಶ್‌ಕುಮಾರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು. 2ನೇ ಪುಟಕ್ಕೆ..........

> ಮಳೆಗಾಲದ ಬೆಳೆಗೆ ಭದ್ರಾ ನೀರು ಹರಿಸುವಂತೆ ನಾವು ಹಲವು ರೀತಿಯ ಹೋರಾಟ ಮಾಡಿದೆವು. ಆದರೆ ನಮ್ಮದೇ ರೈತರ ಇನ್ನೊಂದು ಗುಂಪು ಈಗ ಬೇಡ ಬೇಸಿಗೆ ಬೆಳೆಗೆ ನೀರು ಬಿಡಿ ಎಂದು ಮನವಿ ಮೇಲೆ ಮನವಿ ಸಲ್ಲಿಸಿ, ಬೆಂಗಳೂರಿನಲ್ಲಿ ನಡೆದ ಐಸಿಸಿ ಸಭೆಯಲ್ಲೂ ಗೊಂದಲ ಸೃಷ್ಟಿ ಮಾಡಿತ್ತು. ಆದರೀಗ ಅದೇ ಗುಂಪಿನ ಅಧ್ಯಕ್ಷ ಅಡಿಕೆ ತೋಟಗಳು ಒಣಗುತ್ತಿವೆ ನೀರು ಹರಿಸಿ ಎಂದು ಪತ್ರಿಕಾ ಹೇಳಿಕೆ ನೀಡುತ್ತಿದ್ದಾರೆ ಎಂದ ಅವರು, ಇವರಿಗೆ ಜ್ಞಾನವೇ ಇಲ್ಲ. ಇಂತಹವರಿಂದ ಜಿಲ್ಲೆಯ ರೈತರ ಬದುಕು ಹಾಳಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.
>
> – ಹೆಚ್.ಆರ್.ಲಿಂಗರಾಜ್ ಶಾಮನೂರು, ಅಧ್ಯಕ್ಷರು. ಭಾರತೀಯ ರೈತ ಒಕ್ಕೂಟ


ಭಾವಪೂರ್ಣ ಶ್ರದ್ಧಾಂಜಲಿ



ಸಿ.ಎಚ್. ರಾಕೇಶ್ (ಮುತ್ತು)
ನಿಧನ

ಹರಿಹರ ನಗರದ ಹೈಸ್ಕೂಲ್ ಬಡಾವಣೆಯ ನಿವಾಸಿಗಳಾದ ನಗರಸಭೆ ಮಾಜಿ ಅಧ್ಯಕ್ಷೆ ಶ್ರೀಮತಿ ರಾಧಾ ಸಿ.ಎನ್. ಹುಲಗೇಶ್ ಮತ್ತು ಕಾಂಗ್ರೆಸ್ ಪಕ್ಷದ ಮುಖಂಡರು, ಹರಿಹರ ತಾಲ್ಲೂಕು ಹಾಲುಮತ ಮಹಾಸಭಾದ ಅಧ್ಯಕ್ಷರು ಹಾಗೂ ದಿ. ಇಂಡಿಯಾ ಸೌಹಾರ್ದ ಸೊಸೈಟಿ ಅಧ್ಯಕ್ಷರಾದ ಶ್ರೀ ಸಿ.ಎನ್. ಹುಲಗೇಶ್ ರವರ ಪುತ್ರರಾದ ಸಿ.ಹೆಚ್. ರಾಕೇಶ್ (ಮುತ್ತು) ರವರು ದಿನಾಂಕ: 04.09.2026 ರಂದು ರಸ್ತೆ ಅಪಘಾತಕ್ಕೀಡಾಗಿ ದಿನಾಂಕ: 11.09.2026 ರಂದು ಶುಕ್ರವಾರ ಸಂಜೆ 6.10 ಕ್ಕೆ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ.

ಇವರ ಅಂತ್ಯಕ್ರಿಯೆ ದಿನಾಂಕ: 12.09.2026 ರಂದು ಶನಿವಾರ ಮಧ್ಯಾಹ್ನ 2 ಗಂಟೆಗೆ ಹರಿಹರದ ಹಿಂದೂ ರುದ್ರಭೂಮಿಯಲ್ಲಿ ನಡೆಯಲಿದೆ.

ಇಂತಿ ದುಃಖತಪ್ತ ಕುಟುಂಬದ ಸದಸ್ಯರು, ಬಂಧು, ಮಿತ್ರರು

ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ


## ಹರಿಹರ: ಅದ್ದೂರಿಯಾಗಿ ಜರುಗಿದ 108 ಲಿಂಗೇಶ್ವರ, ಬಸವೇಶ್ವರರ ಪಲ್ಲಕ್ಕಿ ಉತ್ಸವ ಹಾಗೂ ಪರು ಕಾರ್ಯಕ್ರಮ



ಹರಿಹರ : ನಗರದ ಹೊಸ ಭರಂಪುರದ ಶ್ರೀ108 ಲಿಂಗೇಶ್ವರ ದೇವಸ್ಥಾನದಲ್ಲಿ ಶುಕ್ರವಾರ ಬೆಳಗ್ಗೆ 8.30ಕ್ಕೆ ದೇವಸ್ಥಾನ ಸಮಿತಿಯಿಂದ ತುಂಗಭದ್ರಾ ನದಿಗೆ ಬಾಗೀನ ಅರ್ಪಣೆ ಮಾಡಲಾಯಿತು.

ನಂತರ ಕುಂಭಮೇಳಗಳೊಂದಿಗೆ ಶ್ರೀ ಲಿಂಗೇಶ್ವರ, ಶ್ರೀ ಬಸವೇಶ್ವರ ಹೊಳೆ ಪೂಜೆ ನೆರವೇರಿಸಿದ ನಂತರ ಪಲ್ಲಕ್ಕಿಯಲ್ಲಿ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಹೊಸ ಭರಂಪುರ ಮತ್ತು ಹಳೆ ಭರಂಪುರದ ರಾಜಬೀದಿಗಳಲ್ಲಿ ಹೊರಟ ಮೆರವಣಿಗೆಯನ್ನು ಮಹಿಳೆಯರು ತಮ್ಮ ಮನೆಯ ಹತ್ತಿರ ಆಗಮಿಸುತ್ತಿದ್ದಂತೆ ಉತ್ಸವ ಮೂರ್ತಿಗಳಿಗೆ ಪೂಜೆ ಸಲ್ಲಿಸುವುದು ಕಂಡುಬಂತು. ಮೆರವಣಿಗೆಯು ಮರಳಿ ಶ್ರೀ 108 ಲಿಂಗೇಶ್ವರ ದೇವಸ್ಥಾನಕ್ಕೆ ತಲುಪಿದ ನಂತರ ಅನ್ನ ಸಂತರ್ಪಣ (ಪರುವು) ಕಾರ್ಯಕ್ರಮ ಆರಂಭವಾಯಿತು. ಸಾವಿರಾರು ಜನರು ಪರ್ವಿನಲ್ಲಿ ಭಾಗವಹಿಸಿ ಪ್ರಸಾದವನ್ನು ಸೇವಿಸಿ ಲಿಂಗೇಶ್ವರ ಕೃಪೆಗೆ ಪಾತ್ರರಾದರು.

2ನೇ ಪುಟಕ್ಕೆ..........

# ಬಸ್ ತಡೆದು ವಿದ್ಯಾರ್ಥಿಗಳ ಪ್ರತಿಭಟನೆ



ಹರಪನಹಳ್ಳಿ: ತಾಲೂಕಿನ ಕನ್ನಾಯಕನಹಳ್ಳಿ ಗ್ರಾಮಕ್ಕೆ ಬಸ್ ಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಬುಧವಾರ ಹರಪನಹಳ್ಳಿ-ಹೊಳಲು ಮುಖ್ಯ ರಸ್ತೆಯಲ್ಲಿ ಸಾರಿಗೆ ಬಸ್ ತಡೆದು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ಗ್ರಾಮದ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಪಾಲ್ಗೊಂಡು, ಹಲವು ವರ್ಷಗಳಿಂದ ಗ್ರಾಮಕ್ಕೆ ಸಮರ್ಪಕ ಸಾರಿಗೆ ವ್ಯವಸ್ಥೆ ಇಲ್ಲದಿರುವುದರಿಂದ ಎದುರಾಗುತ್ತಿರುವ ಸಮಸ್ಯೆಗಳ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಬಂದಾಗಿನಿಂದಲೂ ಗ್ರಾಮಕ್ಕೆ ಬಸ್ ಸಂಪರ್ಕ ಕಲ್ಪಿಸದಿರುವುದು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಕನ್ನಾಯಕನಹಳ್ಳಿ ಗ್ರಾಮದಲ್ಲಿ ಸುಮಾರು 1,000 ಜನಸಂಖ್ಯೆ ಹಾಗೂ 300ಕ್ಕೂ ಹೆಚ್ಚು ಮನೆಗಳಿದ್ದು ಗ್ರಾಮದ ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳಿಗೆ ತೆರಳಲು ಪ್ರತಿನಿತ್ಯ ಸುಮಾರು 3 ಕಿ.ಮೀ. ದೂರ ಕಾಲ್ನಡಿಗೆಯಲ್ಲಿ ಸಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಗ್ರಾಮದಿಂದ ಪಟ್ಟಣಕ್ಕೆ ನೇರ ಬಸ್ ಸಂಪರ್ಕವಿಲ್ಲದ ಕಾರಣ ವಿದ್ಯಾರ್ಥಿಗಳು ಹಾಗೂ ಮಹಿಳೆಯರು, ವೃದ್ಧರು ಸೇರಿದಂತೆ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಗ್ರಾಮಸ್ಥರು ಅಳಲು ತೊಡಗಿಕೊಂಡರು.

ಗ್ರಾಮಕ್ಕೆ ಬಸ್ ಸಂಪರ್ಕ ಕಲ್ಪಿಸುವಂತೆ ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ, ಗ್ರಾಮದ ಜನರ ಬಹುದಿನಗಳ ಬೇಡಿಕೆಯಾಗಿರುವ ಬಸ್ ಸೌಕರ್ಯವನ್ನು ಕೂಡಲೇ ಕಲ್ಪಿಸಬೇಕು. ಸಂಬಂಧಪಟ್ಟ ಸಾರಿಗೆ ಇಲಾಖೆ ಅಧಿಕಾರಿಗಳು ಗ್ರಾಮಕ್ಕೆ ಬಸ್ ಸಂಚಾರ ಆರಂಭಿಸುವ ಕುರಿತು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಈ ಪ್ರತಿಭಟನೆಯಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಕೆ.ಅಶೋಕ್, ಎಂ.ರವಿ, ಗ್ರಾ ಪಂ ಸದಸ್ಯರಾದ ಡಿಗಾನಾಯ್ಕ್, ಪ್ರಕಾಶ್ ನಾಯ್ಕ್, ಮುಖಂಡರಾದ ಭೋವಿ ಹಾಲೇಶ್, ಹನುಮಂತಪ್ಪ, ಲಕ್ಕಪ್ಪ, ಸೇರಿದಂತೆ ಶಾಲಾ ವಿದ್ಯಾರ್ಥಿಗಳು, ಗ್ರಾಮಸ್ಥರು ಇದ್ದರು.

> ಸ್ವಾತಂತ್ರ್ಯ ಬಂದಾಗಿನಿಂದಲೂ ನಮ್ಮ ಗ್ರಾಮದಲ್ಲಿ ಸಾರಿಗೆ ಇಲಾಖೆ ಬಸ್‌ಗಳನ್ನು ನೋಡಿಲ್ಲ, ನಿತ್ಯ ನೂರಾರು ವಿದ್ಯಾರ್ಥಿಗಳು ಊರಿಂದ ಶಾಲಾ ಕಾಲೇಜುಗಳಿಗೆ ತೆರಳುವಾಗ ಸುಮಾರು 3 ಕೀ.ಮಿ ನಡೆದುಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ ಈ ಸಂಬಂಧ ಅನೇಕ ಬಾರಿ ಸಂಬಂದಿಸಿದ ಅಧಿಕಾರಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ, ಆದ್ದರಿಂದ ಕೂಡಲೇ ನಮ್ಮ ಗ್ರಾಮಕ್ಕೆ ಬಸ್ ವ್ಯವಸ್ಥೆಯನ್ನು ಕಲ್ಪಿಸಿ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು.
>
> -ಕೆ.ಅಶೋಕ್
> ಗ್ರಾ.ಪಂ. ಮಾಜಿ ಅಧ್ಯಕ್ಷರು, ಕನ್ನಾಯಕನಹಳ್ಳಿ.

# ಸಾಹಿತ್ಯ, ಸಂಗೀತ ಹಾಗೂ ರಂಗ ಕಲೆಗಳು ಮಾನವೀಯತೆ ಬೆಳೆಸುತ್ತದೆ: ಪಂಡಿತಾರಾಧ್ಯ ಶ್ರೀ



ದಾವಣಗೆರೆ: ಕ್ರಿಯಾಶೀಲರಾಗಿ ರುವವರ ಮೇಲೆ ಟೀಕೆಗಳು ಬರುವುದು ಸಹಜ, ತಾಳ್ಮೆ ಹಾಗೂ ಸಮಾಧಾನವೇ ನಮ್ಮ ಬದುಕಿನ ಶಕ್ತಿ ಎಂದು ಸಾಣೇಹಳ್ಳಿಯ ಪಂಡಿತಾರಾಧ್ಯ ಶ್ರೀಗಳು ತಿಳಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ 'ದಾವಣಗೆರೆ ನಗರವಾಣಿ' ಪತ್ರಿಕೆಯಲ್ಲಿ ಸತತ ಐದು ವರ್ಷಗಳ ಕಾಲ 'ಅರಿವು-ಮರೆವು' ಶೀರ್ಷಿಕೆಯಡಿ ಬರೆದ ವೈಚಾರಿಕ ಅಂಕಣಗಳನ್ನು ಒಟ್ಟುಗೂಡಿಸಿ ಸಿದ್ಧಪಡಿಸಲಾದ ನಾಲ್ಕು ಸಂಪುಟಗಳ 'ಅರಿವಿನ ಪರಿಧಿ' ಕೃತಿಯನ್ನು ಲೋಕಾರ್ಪಣೆ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಅಕ್ಕಮಹಾದೇವಿಯವರ ವಚನದ ಮೂಲಕ ಬದುಕಿನಲ್ಲಿ ಎದುರಾಗುವ ಒಳಿತು, ಕೆಡಕುಗಳ ಬಗ್ಗೆ ತಿಳಿಸಿದರು.

ಜೀವನದಲ್ಲಿ ಹೊಗಳುವವರು ಮತ್ತು ತೆಗಳುವವರು ಇಬ್ಬರೂ ಇರುತ್ತಾರೆ. ನಾವುಗಳು ಅದಕ್ಕೆ ತುತ್ತಾಗದೇ ನಮ್ಮ ಕೆಲಸವನ್ನು ನಾವು ಮಾಡಿಕೊಂಡು ಹೋಗಬೇಕಿದೆ. ನಮ್ಮಗಳ ಮೇಲೆ ಬರುವ ಟೀಕೆ, ಟಿಪ್ಪಣಿಗಳಿಗೆ ಕುಗ್ಗದೇ, ಬಗ್ಗದೇ ಸದಾ ತಾಳ್ಮೆಯಿಂದ ಎಲ್ಲವನ್ನೂ ಎದುರಿಸಬೇಕು. ಭಕ್ತರ ಜೀವನಾನುಭವಗಳೇ ನಮ್ಮ ಜೀವನದಲ್ಲಿ ಲೇಖನಗಳಾಗಿ ಮೂಡಿ ಬಂದಿವೆ ಎಂದರು.

ಭದ್ರಾ ಮೇಲ್ದಂಡೆ ನೀರಿನ ವಿಚಾರದಲ್ಲಿ ತಮ್ಮ ಹೇಳಿಕೆಯನ್ನು ಕೆಲ ಮಾಧ್ಯಮಗಳು ಅಪಾರ್ಥ ಮಾಡಿಕೊಂಡು ಟೀಕಿಸಿದ್ದನ್ನು ಉಲ್ಲೇಖಿಸಿ, ಪಂಡಿತಾರಾಧ್ಯ ಶ್ರೀಗಳಿಗೆ ದಾವಣಗೆರೆಯಲ್ಲಿ ಭಕ್ತರಿಲ್ಲವೇ, ಕೇವಲ ಚಿತ್ರದುರ್ಗ ಜಿಲ್ಲೆಯಲ್ಲಿ ಮಾತ್ರ ಭಕ್ತರಿದ್ದಾರೆಯೇ ಎನ್ನುವ ಮಾತುಗಳಿಗೆ ಪ್ರತಿಕ್ರಿಯಿಸಿ, ನಾವೂ ಬದುಕಬೇಕು. ಅವರೂ ಬದುಕಬೇಕು. ಯಾರೂ ಸಾಯಬಾರದು ಎನ್ನುವುದು ನಮ್ಮ ಆಶಯ. ಆದರೆ ಮಾಧ್ಯಮದಲ್ಲಿ ಬಂದದ್ದು, ಇವರೆಲ್ಲರೂ ಸಾಯಲಿ ಎನ್ನುವ ಅರ್ಥದಲ್ಲಿ ತಿರುಚಿ ಚಿತ್ರಿಸಲಾಯಿತು ಎಂದು ಬೇಸರ ವ್ಯಕ್ತಪಡಿಸಿದರು.

ಸಾಹಿತ್ಯ, ಸಂಗೀತ ಹಾಗೂ ಕಲೆಗಳು ಮನುಷ್ಯನಲ್ಲಿ ಮಾನವೀಯತೆಯನ್ನು ಬೆಳೆಸುತ್ತವೆ. ಇವುಗಳ ಒಲವಿದ್ದಾಗ ಮಾತ್ರ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ಸಾಧ್ಯ. ಇಂತಹ ವೈಚಾರಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹಿರಿಯರು ತಮ್ಮ ಮಕ್ಕಳನ್ನು ಕರೆದುಕೊಂಡು ಬರಬೇಕು. ಇದರಿಂದ ಮಕ್ಕಳ ಮನಸ್ಸು ವಿಕಾಸಗೊಳ್ಳುತ್ತದೆ ಎಂದರು.

ಇದೇ ತಿಂಗಳು 20 ರಿಂದ 30ರವರೆಗೆ ದಾವಣಗೆರೆಯ ಜಿಲ್ಲಾ ಕ್ರೀಡಾಂಗಣದಲ್ಲಿ 'ವಚನ ನಿನಾದ' ಎಂಬ ವಿನೂತನ ಕಾರ್ಯಕ್ರಮ ನಡೆಯಲಿದೆ. ಸುಮಾರು 1,000 ದಿಂದ 2,000 ಜನರು ಒಟ್ಟಾಗಿ ವಚನಗಳನ್ನು ಹಾಡುವ ಈ ಬೃಹತ್ ಕಾರ್ಯಕ್ರಮದಲ್ಲಿ ಎಲ್ಲರೂ ಭಾಗವಹಿಸಬೇಕಾಗಿ ಶ್ರೀಗಳು ಕೋರಿದರು.

# ನಾಳೆ ಸನ್ಮಾನ, ಪ್ರತಿಭಾ ಪುರಸ್ಕಾರ, ಪದಗ್ರಹಣ

ದಾವಣಗೆರೆ: ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ-ಬೆಂಗಳೂರು ಮತ್ತು ಜಿಲ್ಲಾ ಘಟಕ ದಾವಣಗೆರೆ ಇವರ ವತಿಯಿಂದ ನಿವೃತ್ತ ಪ್ರಾಂಶುಪಾಲರು ಹಾಗೂ ಉಪನ್ಯಾಸಕರಿಗೆ ಸನ್ಮಾನ ಮತ್ತು ಪ್ರತಿಭಾ ಪುರಸ್ಕಾರ, ನೂತನವಾಗಿ ಆಯ್ಕೆಯಾದ ಪದಕೋಶಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಸೆ.13 ರಂದು ಬೆಳಿಗ್ಗೆ 10.30ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ನೆರವೇರಿಸಲಿದ್ದಾರೆ. ನಿವೃತ್ತರಿಗೆ ಸಚಿವ ಕೆ.ಎಸ್. ಬಸವಂತಪ್ಪ ಸನ್ಮಾನಿಸಲಿದ್ದು, ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ ಪ್ರತಿಭಾ ಪುರಸ್ಕಾರ ಪ್ರಧಾನ ಮಾಡಲಿದ್ದಾರೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಜಿಲ್ಲೆಯ ಶಾಸಕರಾದ ಬಸವರಾಜ್ ಶಿವಗಂಗಾ, ಬಿ.ದೇವೇಂದ್ರಪ್ಪ, ಬಿ.ಪಿ.ಹರೀಶ್, ಡಿ.ಜಿ. ಶಾಂತನಗೌಡ, ಬಿ.ದೇವೇಂದ್ರಪ್ಪ, ವಿಪ ಸದಸ್ಯರಾದ ಡಿ.ಟಿ.ಶ್ರೀನಿವಾಸ್, ಬಿ.ಚಿದಾನಂದಗೌಡ ಸೇರಿದಂತೆ ಮತ್ತಿತರ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಸಂಘದ ಅಧ್ಯಕ್ಷ ತಿಪ್ಪೇಸ್ವಾಮಿ ಕಾತ್ರಿಕೆಹಟ್ಟಿ ಅಧ್ಯಕ್ಷತೆ ವಹಿಸುವರು. ವಿಶೇಷ ಆಹ್ವಾನಿತರಾಗಿ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪಳನಿವೇಲು, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ವೀರೇಶ್ ಎಸ್. ಒಡೇನಪುರ, ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಭಾಗವಹಿಸುವರು.

# ಸೆ.15 ರಿಂದ ತಾಲ್ಲೂಕು ಕ್ರೀಡಾಂಗಣದಲ್ಲಿ ದಸರಾ ಕ್ರೀಡಾಕೂಟ ಆಯೋಜನೆ

ದಾ.ನಗರವಾಣಿ ಸುದ್ದಿ,

ಜಗಳೂರು,ಸೆ.11:ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ 2026-27ನೇ ಸಾಲಿನ ಜಗಳೂರು ತಾಲ್ಲೂಕು ಮಟ್ಟದ ದಸರಾ ಕ್ರೀಡಾ ಕೂಟವನ್ನು ದಿ:15-09-2025 ರಂದು ಆಯೋಜಿಸಲಾಗಿದ್ದು ಕ್ರೀಡಾಪಟುಗಳು ಅಗತ್ಯ ದಾಖಲೆಯೊಂದಿಗೆ ನೋಂದಣಿ ಮಾಡಿಕೊಳ್ಳಲು ನಿಯೋಜಿತ ಕ್ರೀಡಾಧಿಕಾರಿ ಸುನಿತಾ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರೀಡೆಯಲ್ಲಿ ಅಥ್ಲೆಟಿಕ್ಸ್ ಸ್ಪರ್ಧೆಗಳಾದ (ಪುರುಷರಿಗೆ) 100 ಮೀ, 200 ಮೀ, 400ಮೀ, 800ಮೀ, 1500ಮೀ, 5000 ಮೀ, 10000ಮೀ ಓಟ, ಉದ್ದ-ಜಿಗಿತ, ಎತ್ತರ ಜಿಗಿತ, ಗುಂಡು ಎಸೆತ, ಟ್ರಿಪಲ್ ಜಂಪ್, ಜಾವಲಿನ್ ಥ್ರೋ, ಡಿಸ್ಕಸ್ ಥ್ರೋ, 110ಮೀ ಹರ್ಡಲ್ಸ್, 4100 ಮೀ. ರಿಲೇ ಆಟಗಳಲ್ಲಿ ಭಾಗವಹಿಸಬಹುದು.

ಅಥ್ಲೆಟಿಕ್ಸ್ ಸ್ಪರ್ಧೆಗಳಾದ (ಮಹಿಳೆಯರಿಗೆ) 100 ಮೀ, 200 ಮೀ,400ಮೀ, 800ಮೀ, 1500ಮೀ, 3000ಮೀ ಓಟ, ಉದ್ದಜಿಗಿತ, ಎತ್ತರ ಜಿಗಿತ, ಗುಂಡು ಎಸೆತ, ಟ್ರಿಪಲ್ ಜಂಪ್, ಜಾವಲಿನ್ ಥ್ರೋ, ಡಿಸ್ಕಸ್ ಥ್ರೋ, 110ಮೀ ಹರ್ಡಲ್ಸ್, 4100 ಮೀ. ರಿಲೇ ಆಟಗಳಲ್ಲಿ ಭಾಗವಹಿಸಬಹುದು ಎಂದು ಮಾಹಿತಿ ನೀಡಿದ್ದಾರೆ.

ಗುಂಪು ಆಟಗಳಾದ ಪುರುಷ ಮತ್ತು ಮಹಿಳಾ ವಿಭಾಗದ ವಾಲಿಬಾಲ್, ಖೋ-ಖೋ, ಕಬಡ್ಡಿ, ಥ್ರೋ ಬಾಲ್, ಪುರುಷರಿಗೆ ಪುಟ್ಬಾಲ್, ಯೋಗಾಸನಗಳಾದ ವೀರಭದ್ರಾಸನ, ಜಾನುಶೀರ್ಶಾಸನ, ಹಲಾಸನ, ಧನುರ್ಸಾನ ಆಯೋಜಿಸಲಾಗಿದೆ ಆಸಕ್ತ ಕ್ರೀಡಾಪಟುಗಳು ಗುರುತಿನ ಚೀಟಿ, ಆಧಾರ್‌ಕಾರ್ಡ್, ಶಾಲಾ-ಕಾಲೇಜಿನ ಗುರುತಿನ ಪ್ರಮಾಣಪತ್ರ ಸಲ್ಲಿಸಿ ನೊಂದಣಿ ಮಾಡಿಕೊಳ್ಳಬಹುದಾಗಿದೆ. ಸಂಪರ್ಕಿಸಿ:9972464313, 9901860439

# ಓಟ ಸ್ಪರ್ಧೆ ; ನವೀನ ಪ್ರಥಮ



ರಾಣೇಬೆನ್ನೂರು,ಸೆ.11: ಪದವಿ ಪೂರ್ವ ಕಾಲೇಜುಗಳ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ನಗರದ ಹೊಸಮನಿ ಸಿದ್ದಪ್ಪ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಯಾದ ನವೀನ.ಬಿ.ದೇಸಾಯಿ 400 ಮೀಟರ್ ಮತ್ತು 800 ಮೀಟರ್ ಓಟದ ಸ್ಪರ್ಧೆಯಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾನೆ.

ಆದ್ದರಿಂದ ಈ ವಿದ್ಯಾರ್ಥಿಗೆ ಕಾಲೇಜಿನ ಪ್ರಾಚಾರ್ಯರಾದ ಕೆ. ಹಳದಪ್ಪ, ಉಪನ್ಯಾಸಕರಗಳಾದ ಡಾ.ಎಚ್ ಓಂಕಾರ್ ನಾಯಕ್, ಎಚ್ ಶಿವಾನಂದ, ಆಶಾ ಆರ್ ಎಸ್, ಶೃತಿ ಬುರಡಿಕಟ್ಟಿ, ಅಭಿರಾಜ್ ಪಾಟೀಲ, ಅಕ್ಷತಾ, ಕಾಲೇಜಿನ ಸಿಬ್ಬಂದಿಗಳಾದ ಆನಂದ ಕೆ.ಇ, ಈರಣ್ಣ ಹಾಗೂ ಕಾಲೇಜಿನ ಸ್ಥಳೀಯ ಸಲಹಾ ಸಮಿತಿಯ ಅಧ್ಯಕ್ಷರು ಸರ್ವ ಸದಸ್ಯರು ಶ್ಲಾಘಿಸಿದ್ದಾರೆ.

ಒಂದನೇ ಪುಟದಿಂದ...............

# ಕರೂರಿನಲ್ಲಿ 200 ಎಕರೆ ಹೊಸ ಲೇಔಟ್

ಐಸಿಸಿ ಸಭೆಯಲ್ಲಿ ನೀರಾವರಿ ತಜ್ಞ ನರಸಿಂಹಪ್ಪ ಹಾಗೂ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಉಪಸ್ಥಿತರಿದ್ದರೂ ಯಾವುದೇ ವಿಷಯ ಪ್ರಸ್ತಾಪಿಸಲಿಲ್ಲ. ಸಚಿವರು ಬಂದಾಗ ಸ್ಥಳೀಯ ಶಾಸಕರು ಜಾರಿಕೊಳ್ಳದೆ, ತಾವೇ ರೈತರನ್ನು ಕೂರಿಸಿಕೊಂಡು ಸಮಸ್ಯೆ ಬಗೆಹರಿಸಬೇಕಿತ್ತು. ಎಲ್ಲರಿಗೂ ಬಾಯಿ ಇದೆ, ನಾಲಿಗೆಗೆ ಎಲುಬಿಲ್ಲ ಎಂಬುದು ಗೊತ್ತಿದೆ. ಆಧಾರರಹಿತವಾಗಿ ಮಾತನಾಡುವುದು ಬಿಟ್ಟು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು ಎಂದು ವಿಪಕ್ಷಗಳನ್ನು ಸಚಿವರು ತೀವ್ರ ತರಾಟೆಗೆ ತೆಗೆದುಕೊಂಡರು.

# ಸೆ.13ಕ್ಕೆ 34ನೇ ರೈತ ಹುತಾತ್ಮರ ದಿನಾಚರಣೆ

ಕಳೆದ 33 ವರ್ಷಗಳಿಂದ ಹುತಾತ್ಮರ ಸ್ಮರಣೆ ಮಾಡುತ್ತಿದ್ದು, ಜಿಲ್ಲೆಯ ಎಲ್ಲಾ ರೈತರು ಈ ಕಾರ್ಯಕ್ರಮಕ್ಕೆ ಆಗಮಿಸಿ ಹುತಾತ್ಮರ ಆತ್ಮಕ್ಕೆ ಶಾಂತಿ ಕೋರಬೇಕು. ಪ್ರಸ್ತುತ ರೈತರ ಪರಿಸ್ಥಿತಿ ಹೇಳತೀರದಾಗಿದೆ. ಮಳೆಬೆಳೆ ಇಲ್ಲದೇ ರೈತರು ಕಂಗಾಲಾಗಿದ್ದಾರೆ. ಯಾವ ರಾಜಕಾರಣಿಗಳು ರೈತರಿಗೆ ಶಕ್ತಿ ತುಂಬುತಿಲ್ಲ. ಇತ್ತ ಸರ್ಕಾರಿ ಅಧಿಕಾರಿಗಳು ರೈತರ ಸಮಸ್ಯೆಗೆ ಪರಿಹಾರ ನೀಡುತ್ತಿಲ್ಲ. ಆ ದೇವರೇ ನಮ್ಮನ್ನು ಕಾಪಾಡಬೇಕಿದೆ. ಮುಂದಾದರೂ ದೇವರು ಒಳ್ಳೆ ಮಳೆ ಬೆಳೆ ಕೊಟ್ಟು ಕಾಪಾಡಲಿ ಎಂದು ಪ್ರಾರ್ಥನೆ ಮಾಡುತ್ತೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹೆಚ್.ಆರ್.ಲಿಂಗರಾಜ್ ಶಾಮನೂರು, ಹೊನ್ನೂರು ಮುನಿಯಪ್ಪ, ರಾಜಶೇಖರ್, ಚನ್ನಬಸಪ್ಪ, ಮೋಹನ್, ಕಲ್ಲಿಂಗಪ್ಪ, ಹಲ್ದಿ ಬಸವರಾಜ, ಆವರಗೆರೆ ರುದ್ರಮುನಿ ಇತರರು ಇದ್ದರು.

# ಪಲ್ಲಕ್ಕಿ ಉತ್ಸವ ಹಾಗೂ ಪರು ಕಾರ್ಯಕ್ರಮ

ದೇವಸ್ಥಾನ ಸಮಿತಿಯ ಗೌರವ ಅಧ್ಯಕ್ಷ ಜಿ.ನಂಜಪ್ಪ, ಅಧ್ಯಕ್ಷ ಬೆಣ್ಣೆ ರೇವಣಸಿದ್ದಪ್ಪ, ಉಪಾಧ್ಯಕ್ಷರಾದ ಕೆ.ಜಿ ಸಿದ್ದಪ್ಪ, ಬಸವರಾಜ ಹರಪನಹಳ್ಳಿ, ಬಾಪುಜಿ ರುದ್ರೇಶ್, ಕಾರ್ಯದರ್ಶಿ ಜಿ.ಬಿ ಮಾಲತೇಶ್, ಖಜಾನ್ಸಿ ಬೆಣ್ಣೆ ಸಿದ್ದಪ್ಪ, ಸಹ ಕಾರ್ಯದರ್ಶಿ ಶಿವಯೋಗಿ ಕಂಚಿಕೇರಿ, ಸದಸ್ಯರಾದ ಪರಮೇಶಪ್ಪ ನೀಲಗುಂದ, ಗಜೇಂದ್ರ ಬೇಲೂರ್, ಮಜ್ಗಿ ಚಂದ್ರಪ್ಪ, ಯಲ್ಲೇಶಪ್ಪ ಕಾಗದ, ಪೂಜಾರ್ ಈಶ್ವರ್. ಕರಿಬಸಪ್ಪ ಕಂಚಿಕೇರಿ, ಗಣೇಶ್ ಚಕ್ಕರಶಾಲೆ ಮುರಿಗೆಮ್ಮ, ಬೆಣ್ಣೆ ಲಕ್ಕೇಶ್. ಯೇರೆಸ್ವಾಮಿ, ಪ್ರಜ್ವಲ್, ಶಶಿಕಲಮ್ಮ ಪಂಪಾಪತಿ ಸ್ವಾಮಿ. ಕಣದಾಳ್ ಮಲ್ಲಿಕಾರ್ಜುನ್. ಕಗ್ಗದ್ವರು ರೇಣುಕ. ರೇಣುಕಾ ಟೀಚರ್. ಬೆಟ್ಟಪ್ಪ, ರೇಣುಕಮ್ಮ. ಮಂಜುಳಮ್ಮ, ರೇಖಾ ಜಿ.ಬಿ. ಕಗ್ಗದ್ವರು ನಂದ. ಶ್ರೀಶಕ್ತಿ ಹಾಗೂ ಚೌಡೇಶ್ವರಿ ಭಜನಾ ಮಂಡಳಿ ಪೂಜಾ ಕಾರ್ಯಕ್ರಮವನ್ನು ಕೊಟ್ರೇಶಪ್ಪ ಶಾಸ್ತ್ರಿ ನೆರವೇರಿಸಿಕೊಟ್ಟರು.

ಒಂದನೇ ಪುಟದಿಂದ...............

# ಸಮ ಸಮಾಜ ಸೃಷ್ಟಿಸುವಲ್ಲಿ ಈ ನೆಲದ ಆಶಾವಾದ

ನಾಡಿನ ಅನೇಕ ಮಠಗಳು ಮೌಢ್ಯಗಳನ್ನು ಬಿತ್ತಿ ಬೆಳೆವ ಕೇಂದ್ರಗಳಾಗಿವೆ. ಅಂಥದ್ದರಲ್ಲಿ ಪಂಡಿತಾರಾಧ್ಯ ಶ್ರೀಗಳು ವೈಚಾರಿಕತೆ ಬಿತ್ತುವ ಎದೆಗಾರಿಕೆ ತೋರುತ್ತಿದ್ದಾರೆ. ಎಲ್ಲ ಸ್ವಾಮಿಗಳೂ ಇವರ ಹಾಗೆ ನಡೆದರೆ ಕಲ್ಯಾಣ ರಾಜ್ಯ ಸ್ಥಾಪನೆ ಸಾಧ್ಯ ಎಂದರು.

ಅರಿವು ಎನ್ನುವುದು ಕೇವಲ ಶಬ್ದವಲ್ಲ, ಇಡೀ ವಚನ ಚಳವಳಿಯ ತಾತ್ವಿಕತೆಯಾಗಿದ್ದು, ಅದು ನಮ್ಮ ಕನ್ನಡ ಪ್ರಜ್ಞೆಯ ಮೂಲವನ್ನು ಒಳಗೊಂಡಿದೆ ಎಂದು ಹಿರಿಯ ಸಾಹಿತಿ ಎಸ್.ಜಿ.ಸಿದ್ದರಾಮಯ್ಯ ಅಭಿಪ್ರಾಯಪಟ್ಟರು. ಸಿದ್ದರಾಮಯ್ಯ ಅವರೂ ಒಂದು ಕೃತಿಯ ಬಿಡುಗಡೆ ಮಾಡಿದರು.

ಅಲ್ಲಮಪ್ರಭುಗಳ 'ಅರಿವು ಅರಿವು ಎಂದೆಂಬಿರಿ, ಅರಿವು ಸಾಮಾನ್ಯವೇ' ಎಂಬ ವಚನವನ್ನು ಉಲ್ಲೇಖಿಸಿ, ಅರಿವಿನೊಳಗೆ ಪ್ರಜ್ಞೆ ಹಾಗೂ ವಿವೇಕವಿದೆ. ಅರಿವು ಅನುಷ್ಠಾನದ ಕ್ರಿಯೆಯಾಗಬೇಕು ಎಂಬ ನಂಬಿಕೆಯೇ ವಚನ ಚಳವಳಿಗೆ ಬುನಾದಿ. 'ಹಿಂದಣ ಹೆಜ್ಜೆ ನೋಡಿ ಕಂಡಲ್ಲದೆ ನಿಂದ ಹೆಜ್ಜೆ ನಡೆಯಲಾಗದು' ಎಂಬಂತೆ ಇತಿಹಾಸವನ್ನು ಸರಿಯಾಗಿ ಅರ್ಥೈಸಿಕೊಂಡು ವರ್ತಮಾನಕ್ಕೆ ಮುಖಾಮುಖಿಯಾದಾಗ ಮಾತ್ರ ತ್ರಿಕಾಲ ಪ್ರಜ್ಞೆ ಒಲಿಯುತ್ತದೆ. ಪಂಪನ "ಅರಿವಂ ಪೊಸಯಿಸುವುದು ಧರ್ಮಂ" ಎಂಬ ಮಾತಿನಂತೆ ಅರಿವು ಮತ್ತು ವಿವೇಕವನ್ನು ನಿರಂತರವಾಗಿ ಹೊಸತುಗೊಳಿಸುವುದೇ ನಿಜವಾದ ಧರ್ಮ. ಧರ್ಮವು ಯಾವುದೋ ಚೌಕಟ್ಟಿನ ತಾತ್ವಿಕ ಸಾರವಲ್ಲ, ಅದು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಜಂಗಮ ಸ್ವರೂಪದ್ದು ಎಂದು ಹೇಳಿದರು.

"ಪರಿಶೀಲಿಸದೆ ಯಾವುದನ್ನೂ ಒಪ್ಪಬಾರದು" ಎಂಬ ಬುದ್ಧನ ನಿಲುವಿನಂತೆ, ಪ್ರಚಲಿತ ಘಟನೆಗಳಿಗೆ ವಚನಕಾರರ ವಿಚಾರಗಳನ್ನು ಬೆಸೆದು ವರ್ತಮಾನದ ಸನ್ನಿವೇಶಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ಶಕ್ತಿ ಈ ಬರವಣಿಗೆಗಿದೆ. ಕೊರೊನಾ, ಜಾಗತಿಕ ಯುದ್ಧ, ಚುನಾವಣೆ, ರೈತ ಹಾಗೂ ಸ್ತ್ರೀವಾದಿ ಚಳವಳಿಗಳು, ರಾಜಕಾರಣ, ಶಿಕ್ಷಣ ಮತ್ತು ಕೃಷಿ ಕ್ಷೇತ್ರಗಳ ಸಾಂಸ್ಕೃತಿಕ-ಚಾರಿತ್ರಿಕ ದಾಖಲೆಯಾಗಿ ಈ ಕೃತಿ ಹೊರಹೊಮ್ಮಿದೆ ಎಂದು ವಿಶ್ಲೇಷಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಹಿರಿಯ ಪತ್ರಕರ್ತ, ನಗರವಾಣಿ ದಿನಪತ್ರಿಕೆಯ ಸಹ ಸಂಪಾದಕ ಬಿ.ಎನ್.ಮಲ್ಲೇಶ್, ಸಮಾಜದಲ್ಲಿ ವೈಚಾರಿಕ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ಅಂಕಣವನ್ನು ಆರಂಭಿಸಲಾಗಿತ್ತು. ಸಂದರ್ಭಕ್ಕೆ ತಕ್ಕಂತೆ ಬದಲಾಗದೆ, ಯಾವುದೇ ಮುಲಾಜಿಲ್ಲದೆ ನೇರವಾಗಿ ವಿಚಾರಗಳನ್ನು ಪ್ರತಿಪಾದಿಸುವ ಸಾಣೇಹಳ್ಳಿ ಶ್ರೀಗಳ ನಡೆ-ನುಡಿ ಒಂದಾಗಬೇಕು ಎಂಬ ಆಶಯ ಈ ಕೃತಿಯಲ್ಲಿದೆ. ಐದು ವರ್ಷಗಳ ಕಾಲ ಬರೆದ ವೈಚಾರಿಕ ಅಂಕಣಗಳನ್ನು ಒಟ್ಟುಗೂಡಿಸಿ ನಾಲ್ಕು ಸಂಪುಟಗಳ ಪುಸ್ತಕ ರೂಪದಲ್ಲಿ ಹೊರ ತರಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಶ್ರಾಂತ ಪ್ರಾಚಾರ್ಯ ಡಾ.ಪ್ರಸಾದಸ್ವಾಮಿ, ಪ್ರೊ.ಆರ್.ತಾರಿಣಿ ಶುಭದಾಯಿನಿ ಇನ್ನೆರಡು ಕೃತಿಗಳನ್ನು ಬಿಡುಗಡೆ ಮಾಡಿದರು. ಪ್ರೊ. ಪ್ರಶಾಂತ್‌ನಾಯ್ಕ ಇತರರು ಇದ್ದರು. ಆರಂಭದಲ್ಲಿ ಅರಿವು ಬಳಗದ ಮುಖ್ಯಸ್ಥ ಹೆಚ್.ಕೆ.ಲಿಂಗರಾಜ್ ಸ್ವಾಗತಿಸಿದರು. ಶಿಕ್ಷಕ ದ್ಯಾಮೇಶ್ ನಿರೂಪಿಸಿದರು. ಓದುಗರ ಪರವಾಗಿ ಎಸ್. ಮಮತಾ ಹಾಗೂ ಶಿವನಕೆರೆ ಬಸವಲಿಂಗಪ್ಪ ಮಾತನಾಡಿದರು. ಕೊನೆಯಲ್ಲಿ ಶ್ರೀಮತಿ ಮಂಜುಳಾ ಬಸವಲಿಂಗಪ್ಪ ವಂದಿಸಿದರು. ಅರಿವು ಬಳಗ ಈ ಕಾರ್ಯಕ್ರಮವನ್ನು ಆಯೋಜಿಸಿತ್ತು.

# ಕೆಪಿಎಸ್‌ಸಿ; ಜ್ಞಾನೇಂದ್ರ, ಕನ್ನಾಳೆಗೆ ಇಡಿ ಗ್ರಿಲ್

ಕೆಪಿಎಸ್‌ಸಿ ನೇಮಕಾತಿ ಅಕ್ರಮ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳಿಗೆ ಹಲವು ಮಹತ್ವದ ಮಾಹಿತಿಗಳು ಲಭ್ಯವಾಗಿವೆ. ಪ್ರಕರಣದಲ್ಲಿ ಆರೋಪಿಯಾಗಿರುವ ಕೆಪಿಎಸ್‌ಸಿ ಮಾಜಿ ಪರೀಕ್ಷಾ ನಿಯಂತ್ರಕ ಜ್ಞಾನೇಂದ್ರ ಕುಮಾರ್ ಗಂಗ್ವಾರ್‌ಗೆ ಸಂಬಂಧಿಸಿದ ಹಣಕಾಸಿನ ವ್ಯವಹಾರಗಳ ಕುರಿತು ತನಿಖೆ ಮುಂದುವರಿದಿದೆ.

ಸಿಐಡಿ ತನಿಖೆಯ ಪ್ರಕಾರ, ಬೆಂಗಳೂರಿನ ಡಿಕನ್ಸನ್ ರಸ್ತೆಯಲ್ಲಿರುವ ಜ್ಯುವೆಲ್ಲರಿ ಅಂಗಡಿಯಿಂದ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ತಮ್ಮ ಗೆಳತಿಗೆ ಸುಮಾರು 26 ಲಕ್ಷ ಮೌಲ್ಯದ ಚಿನ್ನಾಭರಣ ಖರೀದಿಸಿ ಉಡುಗೊರೆಯಾಗಿ ನೀಡಿರುವ ಸಾಧ್ಯತೆ ಕುರಿತು ಮಾಹಿತಿ ಲಭ್ಯವಾಗಿದೆ. ಅಯೋಧ್ಯೆ ಮೂಲದ ಗೆಳತಿಯನ್ನು ಜ್ಯುವೆಲ್ಲರಿ ಅಂಗಡಿಗೆ ಕರೆದೊಯ್ದು ಆಭರಣಗಳನ್ನು ಖರೀದಿಸಿರುವ ಬಗ್ಗೆ ಸಿಐಡಿಗೆ ಛಾಯಾಚಿತ್ರ ಸಾಕ್ಷ್ಯಗಳು ದೊರೆತಿವೆ. ಆಭರಣ ಖರೀದಿಗೆ ಸಂಬಂಧಿಸಿದ ಬಿಲ್‌ಗಳನ್ನು ಸಹ ತನಿಖಾಧಿಕಾರಿಗಳು ವಶಪಡಿಸಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬೀದರ್‌ನ ಲಕ್ಷ್ಮಿ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್‌ನ ಖಾತೆಯಿಂದ ಆಭರಣ ಖರೀದಿಗೆ ಹಣ ಪಾವತಿಯಾಗಿರುವ ಮಾಹಿತಿ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಬಸವರಾಜ್ ಎಂಬ ಹೆಸರಿನ ಖಾತೆಯಿಂದ ಚಿನ್ನ ಖರೀದಿಯ ಬಿಲ್ ಪಾವತಿಯಾಗಿರುವ ಬಗ್ಗೆಯೂ ತನಿಖೆ ನಡೆಯುತ್ತಿದೆ. ಚಿನ್ನಾಭರಣ ಪಡೆದಿದ್ದ ಎನ್ನಲಾಗಿರುವ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಗೆಳತಿಗೆ ವಿಚಾರಣೆಗೆ ಹಾಜರಾಗುವಂತೆ ಸಿಐಡಿ ನೋಟಿಸ್ ನೀಡಿದೆ.

ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಸಹೋದರ ಕಮಲಾಪತಿ ಹೆಸರಿನಲ್ಲಿ ಬೆಂಗಳೂರಿನಲ್ಲಿ ಐಷಾರಾಮಿ ವಿಲ್ಲಾ ಖರೀದಿಸಿರುವ ಬಗ್ಗೆಯೂ ಸಿಐಡಿ ತನಿಖೆ ನಡೆಸುತ್ತಿದೆ.ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ವಿಲ್ಲಾ ಖರೀದಿಸಲಾಗಿದ್ದು, ಈ ಆಸ್ತಿ ಅಕ್ರಮವಾಗಿ ಸಂಪಾದಿಸಿದ ಹಣದಿಂದ ಖರೀದಿಯಾಗಿದೆಯೇ ಎಂಬ ಅನುಮಾನ ಸಿಐಡಿ ಅಧಿಕಾರಿಗಳಲ್ಲಿದೆ.2024ರ ಫೆಬ್ರವರಿಯಿಂದ 2026ರ ಮಾರ್ಚ್‌ವರೆಗೆ ಜ್ಞಾನೇಂದ್ರ ಕುಮಾರ್ ಕೆಪಿಎಸ್‌ಸಿಯ ಪರೀಕ್ಷಾ ನಿಯಂತ್ರಕರಾಗಿ ಕಾರ್ಯನಿರ್ವಹಿಸಿದ್ದರು.

ಕೆಪಿಎಸ್‌ಸಿ ಅಕ್ರಮ ನೇಮಕಾತಿ ಪ್ರಕರಣದ ತನಿಖೆ ಮುಂದುವರಿದಿರುವ ಬೆನ್ನಲ್ಲೇ, ಪರೀಕ್ಷೆಯಲ್ಲಿ ಆಯ್ಕೆಯಾಗಿರುವ ಕೆಲವು ಅಭ್ಯರ್ಥಿಗಳು ನಿರೀಕ್ಷಣಾ ಜಾಮೀನು ಕೋರಿ ನ್ಯಾಯಾಲಯದ ಮೊರೆ ಹೋಗಿದ್ದಾರೆ.ಈ ಅರ್ಜಿಗಳ ವಿಚಾರಣೆ 52ನೇ ಸಿಸಿಹೆಚ್ ನ್ಯಾಯಾಲಯದಲ್ಲಿ ನಡೆಯಲಿದೆ.

# 21ಕ್ಕೆ ನಾಗರಿಕರ ಪಾಲನೆ, ಪೋಷಣೆ ಕಾರ್ಯಾಗಾರ

ದಾವಣಗೆರೆ: ಸೆಪ್ಟೆಂಬರ್ 21ರಂದು ಬೆಳಿಗ್ಗೆ 10.30ಕ್ಕೆ ನಗರದ ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಭವನ, ಎಂಸಿಸಿ ಬಿ ಬ್ಲಾಕ್ ದವನ್ ಕಾಲೇಜ್ ಹತ್ತಿರ ಇಲ್ಲಿ ಪೋಷಕರಿಗೆ ಮತ್ತು ಹಿರಿಯ ನಾಗರಿಕರ ಪಾಲನೆ ಪೋಷಣೆ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮತ್ತು ಕಾರ್ಯಕರ್ತರಿಗಾಗಿ ಒಂದು ದಿನದ ಕಾರ್ಯಾಗಾರ ಉದ್ಘಾಟನಾ ಸಮಾರಂಭವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ, ಕರ್ನಾಟಕ ಸರ್ಕಾರ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಹಿರಿಯ ನಾಗರಿಕರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಲಾದ ಕಾರ್ಯಕ್ರಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ರಂಗೇಗೌಡ.ಸಿ ಉದ್ಘಾಟಿಸುವರು. ಅಪರ ಜಿಲ್ಲಾಧಿಕಾರಿ ಶೀಲವಂತ ಶಿವಕುಮಾರ್ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಟಿ.ಆರ್.ಗುರುಬಸವರಾಜ, ದಾ.ಜಿ.ಹಿ.ನಾ ಸಂಘದ ಅಧ್ಯಕ್ಷರು ಹಾಗೂ ರಾಜ್ಯ ನಿವೃತ್ತ ನೌಕರರ ಸಂಘದ ಉಪಾಧ್ಯಕ್ಷರಾದ ಎಸ್.ಗುರುಮೂರ್ತಿ, ಜಿಲ್ಲಾ ಸರ್ಕಾರಿ ನಿವೃತ್ತ ಸಂಘದ ಅಧ್ಯಕ್ಷ ಡಾ.ಹೆಚ್. ಎಂ ವೀರಯ್ಯ, ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರದ ಕಾರ್ಯದರ್ಶಿ ಮರಿಯಾಚಾರ್.ಕರ.ಪಿ ಭಾಗವಹಿಸುವರು.

# ನಂಜಪ್ಪ ಲೈಫ್ ಕೇರ್‌ನಲ್ಲಿ ಸಾರ್ವಜನಿಕರ ಬೇಡಿಕೆ ಹಿನ್ನೆಲೆ 'ಉಚಿತ ಮಂಡಿನೋವು ತಪಾಸಣಾ ಶಿಬಿರ' ಸೆ.15 ರಿಂದ ಪುನರಾರಂಭ

ಶಿವಮೊಗ್ಗ: ವಯೋಸಹಜ ಮಂಡಿನೋವು ಹಾಗೂ ತೀವ್ರ ಮಾದರಿಯ ಕೀಲು ನೋವಿನಿಂದ ಬಳಲುತ್ತಿರುವ ಜನಸಾಮಾನ್ಯರಿಗೆ ನೆರವಾಗಲು ಶಿವಮೊಗ್ಗದ ಸಾಗರ ರಸ್ತೆಯಲ್ಲಿರುವ 'ನಂಜಪ್ಪ ಲೈಫ್ ಕೇರ್' ಆಸ್ಪತ್ರೆಯಲ್ಲಿ ಆಯೋಜಿಸಲಾಗಿದ್ದ ವಿಶೇಷ 'ಮಂಡಿನೋವು ತಪಾಸಣಾ ಶಿಬಿರ'ಕ್ಕೆ ಸಾರ್ವಜನಿಕರಿಂದ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗಿದೆ. ಈ ಮೊದಲು ಸೆಪ್ಟಂಬರ್ 1 ರಿಂದ 7 ರವರೆಗೆ ರವರೆಗೆ ಮಾತ್ರ ನಿಗದಿಯಾಗಿದ್ದ ಈ ಶಿಬಿರವನ್ನು, ಸಾರ್ವಜನಿಕರ ಅಪಾರ ಬೇಡಿಕೆ ಮತ್ತು ವಿನಂತಿಯನ್ನು ಪುರಸ್ಕರಿಸಿ ಮತ್ತೆ ಸೆಪ್ಟಂಬರ್ 15 ರಿಂದ ಪುನರಾರಂಭಿಸಿ 19 ರವರೆಗೆ, ಸಮಯ ಬೆಳಿಗ್ಗೆ 10:00 ರಿಂದ ಮಧ್ಯಾಹ್ನ 3:00 ರವರೆಗೆ ವಿಸ್ತರಿಸಲಾಗಿದೆ.

ಶಿವಮೊಗ್ಗ ಹಾಗೂ ಸುತ್ತಮುತ್ತ ಜಿಲ್ಲೆ ಮಾತ್ರವಲ್ಲದೆ ಬೆಂಗಳೂರು, ಮೈಸೂರು, ಕೊಡಗು ಹಾಗೂ ಉತ್ತರ ಕರ್ನಾಟಕದ ವಿವಿಧ ಭಾಗಗಳಿಂದ ಪ್ರತಿದಿನ ಹಲವಾರು ಸಾರ್ವಜನಿಕರು ಈ ಉಚಿತ ಶಿಬಿರದ ಸೌಲಭ್ಯ ಪಡೆಯಲು ಆಗಮಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ದೂರದ ಊರುಗಳಿಂದ ಬರುವ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಆಸ್ಪತ್ರೆ ಆಡಳಿತ ಮಂಡಳಿಯು ಶಿಬಿರದ ಅವಧಿಯನ್ನು ವಿಸ್ತರಿಸುವ ಮಹತ್ವದ ನಿರ್ಧಾರ ಕೈಗೊಂಡಿದೆ.

ಯಾರೆಲ್ಲಾ ಈ ಶಿಬಿರದ ಪ್ರಯೋಜನ ಪಡೆಯಬಹುದು?

ದೈನಂದಿನ ಜೀವನದಲ್ಲಿ ಮಂಡಿನೋವಿನಿಂದಾಗಿ ತೀವ್ರ ಯಾತನೆ ಅನುಭವಿಸುತ್ತಿರುವ ಪ್ರತಿಯೊಬ್ಬರಿಗೂ ಈ ಶಿಬಿರ ಅತ್ಯಂತ ಉಪಯುಕ್ತವಾಗಿದೆ. ಮುಖ್ಯವಾಗಿ:

1. ಬಿದ್ದು ಗಾಯಗೊಂಡು, ಸರಿಯಾದ ವೈದ್ಯಕೀಯ ಚಿಕಿತ್ಸೆ ಪಡೆಯದೆ ನಾಟಿ ಕಟ್ಟು (ಸಂಪ್ರದಾಯಿಕ ಕಟ್ಟು) ಮಾಡಿಸಿಕೊಂಡು ಕಾಲು ಡೊಂಕಾಗಿಸಿಕೊಂಡಿರುವವರು.
2. ಸುದೀರ್ಘ ಅವಧಿಯಿಂದ ಹಳೆ ಮಂಡಿನೋವಿನಿಂದ ಬಳಲುತ್ತಿರುವವರು ಹಾಗೂ ಎಲ್ಲೂ ಸೂಕ್ತ ಪರಿಹಾರ ಸಿಗದೆ ಕಂಗಾಲಾದವರು.
3. ಎರಡು ಮಂಡಿಗಳು ಸಂಪೂರ್ಣ ಡೊಂಕಾಗಿ, ಕುಳಿತರೆ ಏಳಲಾಗದೆ, ಮೆಟ್ಟಿಲು ಹತ್ತಲು ಭಯಪಡುವ ಸ್ಥಿತಿಯಲ್ಲಿರುವವರು.
4. ಮೂಳೆಗಳಲ್ಲಿ ಕ್ಯಾಲ್ಸಿಯಂ ಕೊರತೆಯಿಂದಾಗಿ (Bone Calcium Deficiency) ಮೂಳೆ ಸವೆತ ಹಾಗೂ ಕೀಲು ನೋವು ಎದುರಿಸುತ್ತಿರುವವರು.
5. ಕೂತು ಏಳಲು ಕಷ್ಟಪಡುವ ಹಾಗೂ ದೈನಂದಿನ ಕೆಲಸ ಕಾರ್ಯಗಳಿಗೆ ಓಡಾಡಲಾಗದೆ ಮನೆಯಲ್ಲೇ ಕಾಲ ಕಳೆಯುತ್ತಿರುವ ಹಿರಿಯ ನಾಗರಿಕರು ಮತ್ತು ವಯಸ್ಕರು.

ಶಿಬಿರದ ಮುಖ್ಯ ವೈಶಿಷ್ಟ್ಯಗಳು ಹಾಗೂ ಸೌಲಭ್ಯಗಳು:

ಉಚಿತ ಸಮಾಲೋಚನೆ: ಅನುಭವೀ ಮೂಳೆ ಶಸ್ತ್ರಚಿಕಿತ್ಸಕರು (Orthopedic Specialists) ಪ್ರತಿಯೊಬ್ಬ ರೋಗಿಯ ಸಮಸ್ಯೆಯನ್ನು ಕೂಲಂಕುಷವಾಗಿ ತಪಾಸಣೆ ಮಾಡಿ, ಸೂಕ್ತ ಸಲಹೆ ಮತ್ತು ಚಿಕಿತ್ಸಾ ಮಾರ್ಗದರ್ಶನ ನೀಡಲಿದ್ದಾರೆ. (ಗಮನಿಸಿ: ನಂಜಪ್ಪ ಲೈಫ್ ಕೇರ್‌ನಲ್ಲಿ ಪ್ರಥಮ ಬಾರಿಗೆ ಸಮಾಲೋಚನೆ ಪಡೆಯುತ್ತಿದ್ದಲ್ಲಿ ನೋಂದಣಿ ಶುಲ್ಕ ಮಾತ್ರ ಅನ್ವಯಿಸುತ್ತದೆ).

ತಪಾಸಣೆಗಳ ಮೇಲೆ ರಿಯಾಯಿತಿ: ಶಿಬಿರದಲ್ಲಿ ಪಾಲ್ಗೊಳ್ಳುವ ರೋಗಿಗಳಿಗೆ ಅಗತ್ಯವಿರುವ ರಕ್ತ ಪರೀಕ್ಷೆಗಳು ಹಾಗೂ ರೋಗನಿರ್ಣಯ (Diagnostic Tests) ಪರೀಕ್ಷೆಗಳ ಮೇಲೆ ಶೇಕಡಾ 20 ರಷ್ಟು ವಿಶೇಷ ರಿಯಾಯಿತಿ ನೀಡಲಾಗುತ್ತಿದೆ.

ಲಭ್ಯರಿರುವ ತಜ್ಞರು: ಮೂಳೆ ತಜ್ಞರ ಜೊತೆಗೆ ನುರಿತ ಫಿಸಿಯೋಥೆರಪಿಸ್ಟ್ (Physiotherapists), ಸೂಕ್ತ ಆಹಾರ ಪದ್ಧತಿ ತಿಳಿಸಲು ಆಹಾರ ತಜ್ಞರು (Dietitians) ಹಾಗೂ ಮಾನಸಿಕ ಧೈರ್ಯ ತುಂಬಲು ಸೈಕಾಲಜಿಸ್ಟಳು (Psychologists) ಸ್ಥಳದಲ್ಲೇ ಲಭ್ಯವಿರಲಿದ್ದಾರೆ.

ಮಂಡಿನೋವು ಹಾಗೂ ಕೀಲು ನೋವಿನಿಂದ ಮುಕ್ತಿ ಪಡೆದು ಸಕ್ರಿಯ ಜೀವನ ನಡೆಸಲು ಬಯಸುವ ಶಿವಮೊಗ್ಗ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ ಸಾರ್ವಜನಿಕರು, ಹಿರಿಯರು ಮತ್ತು ವಯಸ್ಕರು ಈ ವಿಸ್ತರಿತ ಅವಕಾಶವನ್ನು ತಪ್ಪದೇ ಸದುಪಯೋಗಪಡಿಸಿಕೊಳ್ಳಬೇಕಾಗಿ ಆಸ್ಪತ್ರೆಯ ಪತ್ರಿಕಾ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08182-267300

# ಬರದಲ್ಲೂ ಮಿಂಚಿದ ಬಲವರ್ಧಿತ ಸಿರಿಧಾನ್ಯಗಳು



ದಾವಣಗೆರೆ: ಹವಾಮಾನ ವೈಪರೀತ್ಯ, ತೀವ್ರ ಒಣಹವೆ ಹಾಗೂ ಎಲ್‌ನಿನೋ ಬರಪರಿಸ್ಥಿತಿಯಲ್ಲೂ ಜಗಳೂರು ತಾಲೂಕಿನ ಉಚ್ಚಂಗಿಪುರ ಮತ್ತು ಗುರುಸಿದ್ದಾಪುರ ಗ್ರಾಮಗಳ ರೈತರು ಜೈವಿಕ ಬಲವರ್ಧಿತ ನವಣೆ ಹಾಗೂ ಸಜ್ಜೆ ಬೆಳೆಗಳನ್ನು ಯಶಸ್ವಿಯಾಗಿ ಬೆಳೆದು ಗಮನ ಸೆಳೆದಿದ್ದಾರೆ.

ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ ದಾವಣಗೆರೆ ಇವರ ವತಿಯಿಂದ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಹಮ್ಮಿಕೊಳ್ಳಲಾಗಿದ್ದ ಮುಂಚೂಣಿ ಪ್ರಾತ್ಯಕ್ಷಿಕೆ ಹಾಗೂ ಕ್ಷೇತ್ರೋತ್ಸವದಲ್ಲಿ ಈ ಬೆಳೆಗಳ ವೈಶಿಷ್ಟ್ಯ ಪ್ರದರ್ಶನಗೊಂಡಿತು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ.ಟಿ.ಎನ್.ದೇವರಾಜ್, ಕೇಂದ್ರ ಸರ್ಕಾರದ ಒಂದು ಆರೋಗ್ಯ ಕಲ್ಪನೆಯಡಿ ಬರನಿರೋಧಕ ಹಾಗೂ ಪೌಷ್ಟಿಕಾಂಶ ಭರಿತ ಬೆಳೆಗಳನ್ನು ರೈತರಿಗೆ ಪರಿಚಯಿಸಲಾಗಿದೆ ಎಂದರು.

ಬೇಸಾಯ ತಜ್ಞ ಬಿ.ಓ.ಮಲ್ಲಿಕಾರ್ಜುನ ಮಾತನಾಡಿ, ಐಸಿಎಆರ್-ಐಐಎಂಆರ್ ಹೈದರಾಬಾದ್ ಸಹಯೋಗದಲ್ಲಿ 80-85 ದಿನಗಳ ಅಲ್ಪಾವಧಿಯ ನವಣೆ ಮತ್ತು ಸಜ್ಜೆ ತಳಿಗಳನ್ನು ಪರಿಚಯಿಸಲಾಗಿದೆ. ಇವು ದೀರ್ಘ ಒಣಹವೆ ಮತ್ತು ಹೆಚ್ಚುತ್ತಿರುವ ಉಷ್ಣಾಂಶದಲ್ಲೂ ರೈತರಿಗೆ ಕನಿಷ್ಠ ವೆಚ್ಚದಲ್ಲಿ ಉತ್ತಮ ಇಳುವರಿ ನೀಡಬಲ್ಲವು ಎಂದರು.

ಕೀಟ ವಿಜ್ಞಾನಿ ಡಾ.ಟಿ.ಜಿ.ಅವಿನಾಶ್ ಮಾತನಾಡಿ, ಅಕ್ಕಪಕ್ಕದ ತಾಕುಗಳಲ್ಲಿ ಬೆಳೆದ ಮೆಕ್ಕೆಜೋಳವು ಲದ್ದಿ ಹುಳುವಿನ ಬಾಧೆ ಹಾಗೂ ಬರದ ತಾಪಕ್ಕೆ ತತ್ತರಿಸಿದ್ದರೆ, ಈ ಜೈವಿಕ ಬಲವರ್ಧಿತ ನವಣೆ ಮತ್ತು ಸಜ್ಜೆ ತಾಕುಗಳಲ್ಲಿ ಯಾವುದೇ ರೋಗ ಅಥವಾ ಕೀಟಬಾಧೆ ಕಂಡುಬಂದಿಲ್ಲ ಎಂದು ತಿಳಿಸಿದರು.

ಗೃಹ ವಿಜ್ಞಾನಿ ಡಾ.ಸುಪ್ರಿಯಾ ಪಾಟೀಲ್ ಮಾತನಾಡಿ, ಈ ತಳಿಗಳಲ್ಲಿ ಕಬ್ಬಿಣದ ಅಂಶ ಹಾಗೂ ಸತು ಹೇರಳವಾಗಿದ್ದು, ಮಕ್ಕಳು ಮತ್ತು ಗರ್ಭಿಣಿಯರಲ್ಲಿ ರಕ್ತಹೀನತೆ ಹಾಗೂ ಪೋಷಕಾಂಶಗಳ ಕೊರತೆಯನ್ನು ನಿವಾರಿಸಲು ಅತ್ಯಂತ ಸಹಕಾರಿಯಾಗಿದೆ ಎಂದರು. ಕಾರ್ಯಕ್ರಮದಲ್ಲಿ ಕೃಷಿ ಇಲಾಖೆ, ಆತ್ಮ ಯೋಜನೆಯ ಸಿಬ್ಬಂದಿಗಳು, ಪ್ರಗತಿಪರ ರೈತರಾದ ದಾಸಪ್ಪ, ಚಂದ್ರಪ್ಪ ಇತರರು ಇದ್ದರು.

# ವೇತನ ಬಿಡುಗಡೆಗೆ ಬಿಸಿಯೂಟ ತಯಾರಕರ ಆಗ್ರಹ




ದಾವಣಗೆರೆ: ಕಳೆದ 3 ತಿಂಗಳಿಂದ ಬಾಕಿ ಇರುವ ವೇತನ ಬಿಡುಗಡೆ ಮಾಡುವಂತೆ ಆಗ್ರಹಿಸಿ ಎಐಟಿಯುಸಿ ಸಂಯೋಜಿತ ಬಿಸಿಯೂಟ ತಯಾರಕರ ದಾವಣಗೆರೆ ತಾಲ್ಲೂಕು ಸಮಿತಿ ನಗರದ ಉಪ ವಿಭಾಗಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿತು. ಎಸಿ ಮುಖಾಂತರ ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಶಿಕ್ಷಣ ಸಚಿವ ಮಧು ಬಂಗಾರಪ್ಪಗೆ ಮನವಿ ರವಾನಿಸುವಂತೆ ಮನವಿ ಮಾಡಿದರು.

ಈ ವೇಳೆ ಮಾತನಾಡಿದ ಫೆಡರೇಶನ್ ರಾಜ್ಯಾಧ್ಯಕ್ಷ ಆವರಗೆರೆ ಚಂದ್ರು, ಬಿಸಿಯೂಟ ತಯಾರಕರಿಗೆ ವೇತನ ನೀಡಲು ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಅನುದಾನದ ಹಣ ಜಮಾಗೊಂಡಿದ್ದು, ಇವರಿಗೆ ವೇತನ ನೀಡಲು ಹಣದ ಕೊರತೆ ಇರುವುದಿಲ್ಲ. ಕಾರಣ ಮಧ್ಯಾಹ್ನ ಉಪಹಾರ, ಯೋಜನೆ ರಾಜ್ಯ ಕಚೇರಿ ಅಧಿಕಾರಿಗಳು ಸರಿಯಾಗಿ ತಮ್ಮ ಕೆಲಸ ನಿರ್ವಹಿಸದೆ ನಿರ್ಲಕ್ಷ ತೋರಿರುವುದೇ ಇದಕ್ಕೆಲ್ಲ ಕಾರಣ. ಶಿಕ್ಷಣ ಮಂತ್ರಿಗಳಿಗೆ ಅಧಿಕಾರಿಗಳ ಮೇಲೆ ಹಿಡಿತ ಇಲ್ಲದಿರುವುದೇ ಕಾರಣ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

ಬಿಸಿಯೂಟ ತಯಾರಕರ ಸಮಸ್ಯೆಗಳು ಅನೇಕ ಇದ್ದು, ಅವುಗಳ ಬಗ್ಗೆ ಚರ್ಚಿಸಲು ಸಭೆ ಕರೆಯಲು ಹಲವು ಬಾರಿ ಶಿಕ್ಷಣ ಮಂತ್ರಿಗಳಿಗೆ ಮನವಿ ಸಲ್ಲಿಸಿದ್ದರೂ ಶಿಕ್ಷಣ ಮಂತ್ರಿಗಳು ನಿರ್ಲಕ್ಷ್ಯ ಮಾಡಿದ್ದು, ಈ ಹಿನ್ನೆಲೆಯಲ್ಲಿ ಇಂದು ಹೋರಾಟ ಹಮ್ಮಿಕೊಳ್ಳಲಾಗಿದೆ. ಕೂಡಲೇ ಬಿಸಿಯೂಟ ತಯಾರಕರಿಗೆ ಬಾಕಿ ವೇತನ ಬಿಡುಗಡೆ ಮಾಡಲೇಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ಕಚೇರಿಯ ಒಳಗೆ ಕುಳಿತು ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸಭೆಯನ್ನು ಉದ್ದೇಶಿಸಿ ಸಂಘಟನೆಯ ಜಿಲ್ಲಾಧ್ಯಕ್ಷೆ ಮಳಲ್ಕೆರೆ ಜಯಮ್ಮ, ನಾಗರತ್ನಮ್ಮ, ರಮೇಶ್ ಸಿ.ದಾಸರ, ಜಿ.ಎಲ್ಲಪ್ಪ, ನರೇಗಾ ರಂಗನಾಥ್, ಎ.ತಿಪ್ಪೇಶ್, ಸರೋಜಾ, ಕರೂರು ಮಂಜುಳಾ ಇತರರು ಮಾತನಾಡಿದರು. ಈ ವೇಳೆ ಬಿಸಿಯೂಟ ತಯಾರಕರು ಇದ್ದರು.

# ಕಾರ್ಮಿಕರೊಂದಿಗೆ ಬಸವಂತಪ್ಪ ಭೋಜನ



ದಾವಣಗೆರೆ: ಅಧಿಕಾರದ ಉನ್ನತ ಸ್ಥಾನದಲ್ಲಿದ್ದರೂ ಸಾಮಾನ್ಯರೊಂದಿಗೆ ಬೆರೆತು, ಅವರೊಂದಿಗೆ ಕುಳಿತು ಊಟ ಮಾಡುವ ಸರಳತೆ ರಾಜಕಾರಣದಲ್ಲಿ ಅಪರೂಪ. ಅಂತಹ ಅಪರೂಪದ ಕ್ಷಣಕ್ಕೆ ವಿಧಾನಸೌಧ ಸಾಕ್ಷಿಯಾಯಿತು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ 100 ದಿನಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಬೆಂಗಳೂರಿನ ವಿಧಾನಸೌಧದಲ್ಲಿ ಆಯೋಜಿಸಿದ್ದ 'ದೃಢ ಕರ್ನಾಟಕ ಸಂಕಲ್ಪ' ಕಾರ್ಯಕ್ರಮದಲ್ಲಿ ಸಚಿವ ಕೆ.ಎಸ್.ಬಸವಂತಪ್ಪ ಅವರು ಪೌರಕಾರ್ಮಿಕರು, ಆಶಾ ಕಾರ್ಯಕರ್ತೆಯರು, ಶ್ರಮಿಕರು, ಯುವಜನರು ಹಾಗೂ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳೊಂದಿಗೆ ಸಹಪಂಕ್ತಿ ಭೋಜನ ಸವಿದರು.ಸಚಿವರಾಗಿದ್ದರೂ ಯಾವುದೇ ಅಹಂ ಇಲ್ಲದೆ ವಿಧಾನಸೌಧದ ಕಾರ್ಮಿಕರೊಂದಿಗೆ ಒಂದೇ ಸಾಲಿನಲ್ಲಿ ಕುಳಿತು ಊಟ ಮಾಡಿದ ಬಸವಂತಪ್ಪ ಅವರ ನಡೆ ಗಮನ ಸೆಳೆಯಿತು. 'ನಾನು ಕಾರ್ಮಿಕರ ಮಗ' ಎಂಬ ತಮ್ಮ ಹಿನ್ನೆಲೆಯನ್ನು ಕೇವಲ ಮಾತಿನಲ್ಲಿ ಹೇಳುವುದಷ್ಟೇ ಅಲ್ಲ, ನಡೆ-ನುಡಿಯಲ್ಲೂ ತೋರಿಸಿಕೊಟ್ಟರು ಎಂಬ ಮೆಚ್ಚುಗೆ ವ್ಯಕ್ತವಾಯಿತು.

ಆಡಳಿತ ವರ್ಗದವರು ಹಾಗೂ ಸಮಾಜದ ಕಟ್ಟಕಡೆಯ ಜನರು ಒಂದೇ ಪಂಕ್ತಿಯಲ್ಲಿ ಕುಳಿತು ಸಹಭೋಜನ ಮಾಡಿದ್ದು, ಪ್ರಜಾಪ್ರಭುತ್ವದ ನಿಜವಾದ ಸೌಂದರ್ಯವನ್ನು ಅನಾವರಣಗೊಳಿಸಿತು. ಅಧಿಕಾರದ ಸ್ಥಾನಮಾನ, ಹುದ್ದೆ, ವರ್ಗದ ಭೇದಗಳನ್ನು ಬದಿಗೊತ್ತಿ ಜನರೊಂದಿಗೆ ಬೆರೆತ ಈ ಕ್ಷಣ ಕಾರ್ಯಕ್ರಮಕ್ಕೆ ವಿಶೇಷ ಅರ್ಥ ನೀಡಿತು.

## "ಯೋಗ ಮತ್ತು ಆರೋಗ್ಯ"

- ಶ್ರೀಮತಿ ಲಾವಣ್ಯ ಎಸ್. ಪಿ.

# ಪರಿವೃತ್ತ ಅರ್ಧ ಹನುಮಾನಾಸನ:



"ದಿನವಿಡೀ ಕಂಪ್ಯೂಟರ್ ಮುಂದೆ ಕುಳಿತು ಕೆಲಸ ಮಾಡುವವರ ದೇಹದ ಜೋಡಣೆಯನ್ನು ಸರಿಪಡಿಸಲು ಉತ್ತಮವಾದ ಆಸನವಾಗಿದೆ"

ಅರ್ಥ: ಪರಿವೃತ್ತ-ತಿರುಗಿದ/ದೇಹವನ್ನು ತಿರುಗಿಸುವುದು, ಅರ್ಧ-ಅರ್ಧ ಭಾಗ ಹನುಮಾನಾಸನ-ಹನುಮಂತನ ಭಂಗಿಯನ್ನು ಹೋಲುವ ಆಸನ. ದೇಹದ ಸಮತೋಲನ, ನಮ್ಯತೆ,ಬೆನ್ನಿನ ತಿರುವನ್ನು (Twist) ಸುಧಾರಿಸುವ ಒಂದು ಅತ್ಯುತ್ತಮ ಯೋಗಾಸನವಾಗಿದೆ.

ಮಾಡುವ ವಿಧಾನ:

* ಅಧೋಮುಖ ಶ್ವಾನಾಸನದಿಂದ ಇದನ್ನು ಆರಂಭಿಸಿ.

* ಉಸಿರನ್ನು ತೆಗೆದುಕೊಳ್ಳುತ್ತಾ, ಎಡ ಕಾಲನ್ನು ಮುಂದಕ್ಕೆ ತನ್ನಿ. ಪಾದದ ಹಿಮ್ಮಡಿ ನೆಲದ ಮೇಲಿರಲಿ, ಬಲ ಮಂಡಿ ನೆಲದ ಮೇಲಿರಲಿ. * ಉಸಿರನ್ನು ಹೊರಹಾಕುತ್ತಾ, ಕತ್ತನ್ನು (Torso) ಎಡ ಕಾಲಿನ ಕಡೆಗೆ ನಿಧಾನವಾಗಿ ತಿರುಚಿ. * ಒಂದು ಕೈಯನ್ನು ನೆಲದ ಮೇಲಿಟ್ಟು, ಮತ್ತೊಂದು ಕೈಯನ್ನು ನೇರವಾಗಿ ಆಕಾಶದ ಕಡೆಗೆ ಮೇಲಕ್ಕೆತ್ತಿ. * ಈ ಭಂಗಿಯಲ್ಲಿ 4 ರಿಂದ 6 ಸಾಮಾನ್ಯ ಉಸಿರಾಟಗಳವರೆಗೆ ಇರಿಸಿ.

ಮುಕ್ತಾಯ: ನಂತರ ಮೊದಲಿನ ಸ್ಥಿತಿಗೆ ಬಂದು, ವಿಶ್ರಾಂತಿ ಪಡೆಯಿರಿ, ಇದೇ ಕ್ರಮವನ್ನು ಇನ್ನೊಂದು ಕಾಲಿನಿಂದಲೂ ಪುನರಾವರ್ತಿಸಿ.

ಉಪಯೋಗಗಳು:

* ಕಾಲುಗಳ ಮಂಡಿರಜ್ಜುಗಳು (Hamstring), ಪೃಷ್ಠದ ಸ್ನಾಯುಗಳು, ಕರುಳಿನ ಸ್ನಾಯುಗಳನ್ನು ಚೆನ್ನಾಗಿ ವಿಸ್ತರಿಸುತ್ತದೆ. * ತೊಡೆಗಳ ಹಿಂಭಾಗದ ಸ್ನಾಯುಗಳನ್ನು (Hamstring), ಸೊಂಟದ ಭಾಗವನ್ನು ಬಲಪಡಿಸುತ್ತದೆ. * ದೇಹದ ಸಮತೋಲನ, ಏಕಾಗ್ರತೆಯನ್ನು ವೃದ್ಧಿಸುತ್ತದೆ. * ಬೆನ್ನು, ಕುತ್ತಿಗೆಯ ಭಾಗಕ್ಕೆ ಉತ್ತಮ ವ್ಯಾಯಾಮ ನೀಡಿ ನಮ್ಯತೆ ಹೆಚ್ಚಿಸುತ್ತದೆ. * ಹೊಟ್ಟೆಯ ಭಾಗದ ಅಂಗಗಳನ್ನು ಉತ್ತೇಜಿಸಿ, ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ.

ಗಮನಿಸಿ: ಇತ್ತೀಚೆಗೆ ಸೊಂಟ, ಬೆನ್ನು, ಮಂಡಿ, ಕುತ್ತಿಗೆಯ ಸರ್ಜರಿ, ತೀವ್ರ ಗಾಯಗಳಾಗಿದ್ದರೆ ಈ ಆಸನವನ್ನು ಮಾಡಬಾರದು.

ಏನಾದರೂ ಸಂದೇಹಗಳಿದ್ದರೆ ಈ ನಂಬರಿಗೆ ಸಂಪರ್ಕಿಸಿ: 8762089106

ಯೋಗಾಸನಗಳನ್ನು ಯೋಗ ಶಿಕ್ಷಕರ ಮಾರ್ಗದರ್ಶನದಲ್ಲಿ ಮಾಡಬೇಕು. ಪತ್ರಿಕೆ ಓದಿ ಸ್ವಯಂ ಅಭ್ಯಾಸ ಒಳ್ಳೆಯದಲ್ಲ

# ಹರಿಹರ; ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಹರಿಹರ: ವಿದ್ಯಾರ್ಥಿಗಳ ಸುಲಲಿತ ಶೈಕ್ಷಣಿಕ ಬದುಕಿಗೆ ಸಮುದಾಯದ ಆಸರೆ ಅಗತ್ಯ ಎಂದು ಶಾಸಕ ಬಿ.ಪಿ.ಹರೀಶ್ ಹೇಳಿದರು.

ನಗರದಲ್ಲಿ ಐರಣಿ ಮಠದ ಸಮುದಾಯ ಭವನದಲ್ಲಿ ಮಂಗಳವಾರ ಹೊಂಗಿರಣ ಸೇವಾ ಟ್ರಸ್ಟ್ ಹಾಗೂ ಶ್ರೀ ನಾರೇಯಣ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ಸಹಯೋಗದಲ್ಲಿ 2025-26ನೇ ಸಾಲಿನ ಅರ್ಹ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಈ ಎರಡೂ ಸಂಸ್ಥೆಯವರು ಪ್ರತಿ ವರ್ಷವೂ ಜಾತಿ, ಸಮುದಾಯದ ಗಡಿ ಮೀರಿ ಪಾರದರ್ಶಕವಾಗಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಸತ್ಕರಿಸಿ, ಹಣದ ರೂಪದಲ್ಲಿ ಸಹಾಯ ಮಾಡುತ್ತಾ ಬೆನ್ನು ತಟ್ಟುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ತಾಲ್ಲೂಕು ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣ ಮುಗಿಸಿ ಉತ್ತಮ ಸ್ಥಾನಕ್ಕೇರಿದ ನಂತರ ಬಡ ವಿದ್ಯಾರ್ಥಿಗಳ ಕೈ ಹಿಡಿಯಬೇಕೆಂದು ಹೇಳಿದರು.

ಉಪನ್ಯಾಸ ನೀಡಿದ ರಟ್ಟಿಹಳ್ಳಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಚಾಮರಾಜ ಕಮ್ಮಾರ ಮಾತನಾಡಿ, ಗುರಿ ನಿಗದಿ, ಗುರಿಯತ್ತ ಸಾಗುವುದು, ಪೋಷಕರ ಮೇಲೆ ಗೌರವ, ಸಮಾಜಮುಖಿ ಚಿಂತನೆ, ಆತ್ಮವಿಶ್ವಾಸ ಎಂಬ ಪಂಚ ಸೂತ್ರಗಳನ್ನು ಅಳವಡಿಸಿಕೊಂಡ ವಿದ್ಯಾರ್ಥಿ ಯಶಸ್ಸನ್ನು ಗಳಿಸಲು ಸಾಧ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಹೊಂಗಿರಣ ಸೇವಾ ಟ್ರಸ್ಟ್ ನ ಅಧ್ಯಕ್ಷ ಎನ್.ಬಿ.ವಿಜಯ ಕುಮಾರ್ ಮಾತನಾಡಿ, ಹರಿಹರ-ದಾವಣಗೆರೆ ಪರಿಸರದಾಚೆಯೂ ವಿಭಿನ್ನ, ಹೊಸ ಕೋರ್ಸ್ ಗಳಿದ್ದು ಅವುಗಳತ್ತ ಚಿತ್ತ ಹರಿಸಬೇಕು, 3-4 ವರ್ಷ ಮನೆಯಿಂದ ಹೊರಗಿದ್ದು ಓದುವ ಮಾನಸಿಕತೆ ಬೆಳೆಸಿಕೊಳ್ಳಬೇಕೆಂದರು.

ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ.ಯ 70 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕರಿಸಿ ನಗದು ಹಾಗೂ ಲೇಖನ ಸಾಮಗ್ರಿಗಳನ್ನು ವಿತರಿಸಲಾಯಿತು. ಕರಣ್ ಕೆ.ಎಚ್. ,ಮತ್ತು ಅಭಿವಂದನ ಜೆ.ಬಿ. ಪ್ರಾರ್ಥಿಸಿದರು, ಎನ್.ಬಿ.ಗಣೇಶ್ ಸ್ವಾಗತಿಸಿದರು, ಕೊಟ್ರೇಶ್ ಹಳ್ಳಿ ಪ್ರಸ್ತಾವನೆ ಮಾಡಿದರು, ಶೃತಿ ಪಿ. ನಿರೂಪಿಸಿದರು, ಸಂದೀಪ್ ಕೆ.ಸಿ. ವಂದಿಸಿದರು.

ಶ್ರೀ ನಾರೇಯಣ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ಉಪಾಧ್ಯಕ್ಷ ವಿಷ್ಣುಮೂರ್ತಿ ಎಸ್.ಎನ್., ನಿರ್ದೇಶಕರಾದ ಭದ್ರಾಚಾರಿ ಎಚ್.ಎಂ., ಕೃಷ್ಣ ಜಿ.ಕುಲಕರ್ಣಿ, ಜ್ಯೋತಿ ಜಿ.ಎನ್., ವರ್ಜಪ್ಪ ಎಸ್.ವಿ., ಎಚ್.ಎನ್.ಮಾಸನಹಳ್ಳಿ ಇದ್ದರು.

# ಭಾರತದ ಆರ್ಥಿಕತೆಗೆ ಐಎಂಎಫ್ ಮೆಚ್ಚುಗೆ

ನವದೆಹಲಿ: ಜಾಗತಿಕ ಮಟ್ಟದಲ್ಲಿ ಅಸ್ಥಿರತೆ ಹಾಗೂ ಹಲವು ಸವಾಲುಗಳು ಎದುರಾಗಿರುವ ನಡುವೆಯೂ ಭಾರತೀಯ ಆರ್ಥಿಕತೆಯು ಅಸಾಧಾರಣ ಸ್ಥಿತಿಸ್ಥಾಪಕತ್ವ ಪ್ರದರ್ಶಿಸಿದೆ ಎಂದು ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಮೆಚ್ಚುಗೆ ವ್ಯಕ್ತಪಡಿಸಿದೆ.

ಸೇವಾ ವಲಯ ಹಾಗೂ ರಫ್ತು ಕ್ಷೇತ್ರದಲ್ಲಿನ ಗಣನೀಯ ಚೇತರಿಕೆಯ ಪರಿಣಾಮ ಭಾರತದ ಜಿಡಿಪಿ ಬೆಳವಣಿಗೆ ನಿರೀಕ್ಷೆಗಳನ್ನು ಮೀರಿ ಶೇ.7.8ರಷ್ಟು ದಾಖಲಾಗಿದೆ ಎಂದು ಐಎಂಎಫ್ ತಿಳಿಸಿದೆ. ಜಾಗತಿಕ ಇಂಧನ ಬೆಲೆ ಏರಿಕೆ, ಭೌಗೋಳಿಕ ರಾಜಕೀಯ ಉದ್ವಿಗ್ನತೆ, ಪೂರೈಕೆ ಸರಪಳಿ ವ್ಯತ್ಯಯ ಹಾಗೂ ಹಣದುಬ್ಬರದಂತಹ ಸವಾಲುಗಳ ನಡುವೆಯೂ ಭಾರತ ತನ್ನ ಆರ್ಥಿಕ ಬಲವನ್ನು ಕಾಯ್ದುಕೊಂಡಿದೆ ಎಂದು ಸಂಸ್ಥೆ ಅಭಿಪ್ರಾಯಪಟ್ಟಿದೆ.

ಕೋವಿಡ್ ನಂತರದ ಆರ್ಥಿಕ ಚೇತರಿಕೆ, ಕಚ್ಚಾ ತೈಲ ಮತ್ತು ಇಂಧನ ಬೆಲೆಗಳಲ್ಲಿನ ಏರಿಳಿತ ಹಾಗೂ ಜಾಗತಿಕ ಭೌಗೋಳಿಕ ರಾಜಕೀಯ ಬಿಕ್ಕಟ್ಟುಗಳು ಹಲವು ಪ್ರಮುಖ ರಾಷ್ಟ್ರಗಳ ಆರ್ಥಿಕತೆಗಳ ಮೇಲೆ ಪರಿಣಾಮ ಬೀರಿದ್ದವು. ಪೂರೈಕೆ ಸರಪಳಿಯಲ್ಲಿನ ವ್ಯತ್ಯಯ ಹಾಗೂ ಹಣದುಬ್ಬರದ ಒತ್ತಡವೂ ಆರ್ಥಿಕ ಬೆಳವಣಿಗೆಗೆ ಅಡ್ಡಿಯಾಗಿತ್ತು. ಆದರೆ ಭಾರತ ಈ ಪ್ರತಿಕೂಲ ಪರಿಸ್ಥಿತಿಗಳನ್ನು ಸಮರ್ಥವಾಗಿ ಎದುರಿಸುವ ಮೂಲಕ ತನ್ನ ಆರ್ಥಿಕ ನೀತಿಗಳನ್ನು ಮತ್ತಷ್ಟು ಬಲಪಡಿಸಿಕೊಂಡಿದೆ ಎಂದು ಐಎಂಎಫ್ ಹೇಳಿದೆ.

ಕೇಂದ್ರ ಸರ್ಕಾರದ ಆರ್ಥಿಕ ಸುಧಾರಣೆಗಳು, ಉತ್ಪಾದನೆ ಆಧಾರಿತ ಪ್ರೋತ್ಸಾಹಕ (ಪಿಎಲ್ಐ) ಯೋಜನೆಗಳು ಹಾಗೂ ಡಿಜಿಟಲ್ ಮೂಲಸೌಕರ್ಯಗಳ ವಿಸ್ತರಣೆಯು ದೇಶದ ಆರ್ಥಿಕ ಬೆಳವಣಿಗೆಗೆ ಬಲವಾದ ಅಡಿಪಾಯ ಒದಗಿಸಿವೆ.

ಐಎಂಎಫ್‌ನ ಅಧಿಕೃತ ವಕ್ತಾರೆ ಜೂಲಿ ಕೊಜಾಕ್ ಇತ್ತೀಚಿನ ಪತ್ರಿಕಾಗೋಷ್ಠಿಯಲ್ಲಿ ಭಾರತದ ಆರ್ಥಿಕತೆಯು ಜಾಗತಿಕ ಅಂದಾಜುಗಳನ್ನು ಮೀರಿ ಉತ್ತಮ ಸಾಧನೆ ಮಾಡಿದೆ ಎಂದು ತಿಳಿಸಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಒತ್ತಡಗಳಿದ್ದರೂ ಭಾರತದ ಆರ್ಥಿಕತೆ ತನ್ನ ಬಲವನ್ನು ಉಳಿಸಿಕೊಂಡಿದೆ. ಕೃಷಿ ಕ್ಷೇತ್ರದ ಬೆಂಬಲದ ಜತೆಗೆ ಮಾಹಿತಿ ತಂತ್ರಜ್ಞಾನ, ಹಣಕಾಸು ಮತ್ತು ವೃತ್ತಿಪರ ಸೇವೆಗಳಂತಹ ದ್ವಿತೀಯ ಹಾಗೂ ತೃತೀಯ ವಲಯಗಳು ಜಿಡಿಪಿ ಬೆಳವಣಿಗೆಗೆ ಪ್ರಮುಖ ಕೊಡುಗೆ ನೀಡಿವೆ.

ಭಾರತ ಸರ್ಕಾರವು ತನ್ನ ಸಾಂಖ್ಯಿಕ ಚೌಕಟ್ಟನ್ನು ಆಧುನೀಕರಿಸಲು ಕೈಗೊಂಡಿರುವ ಕ್ರಮಗಳನ್ನೂ ಐಎಂಎಫ್ ಸ್ವಾಗತಿಸಿದೆ. ಹೊಸ ಸಗಟು ಬೆಲೆ ಸೂಚ್ಯಂಕ ಹಾಗೂ ಕೈಗಾರಿಕಾ ಉತ್ಪಾದನಾ ಸೂಚ್ಯಂಕಗಳ ಪರಿಷ್ಕರಣೆಯಿಂದ ಆರ್ಥಿಕ ದತ್ತಾಂಶಗಳ ನಿಖರತೆ ಹೆಚ್ಚಿದ್ದು, ಜಾಗತಿಕ ಹೂಡಿಕೆದಾರರ ವಿಶ್ವಾಸ ಮತ್ತಷ್ಟು ಬಲಗೊಂಡಿದೆ ಎಂದು ತಿಳಿಸಿದೆ.

# ಮಲ್ಲಿಕಾರ್ಜುನ ಖರ್ಗೆ ಕಾರ್ಯಕ್ರಮದ ಜಾಗ ಶುದ್ಧೀಕರಣ ಘಟನೆ ಖಂಡಿಸಿ 12ಕ್ಕೆ ಕಾಂಗ್ರೆಸ್ ಪ್ರತಿಭಟನೆ

ದಾವಣಗೆರೆ: ಉತ್ತರಾಖಂಡದ ಹಲ್ದ್ವಾನಿನಲ್ಲಿ ರಾಹುಲ್ ಗಾಂಧಿ ವಿರುದ್ಧ ಎಫ್ಐಆರ್ ದಾಖಲಾಗಿರುವುದು ಹಾಗೂ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆರವರ ಕಾರ್ಯಕ್ರಮದ ಜಾಗವನ್ನು ಶುದ್ಧೀಕರಣ ಮಾಡವಂತೆ ಹೇಳಿಕೆ ನೀಡಿರುವುದನ್ನು ಖಂಡಿಸಿ ಸೆಪ್ಟಂಬರ್ 12ರಂದು ಜಿಲ್ಲಾ ಕಾಂಗ್ರೆಸ್ ವತಿಯಿಂದ ಮೌನ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 11 ಗಂಟೆಗೆ ಮಹಾತ್ಮ ಗಾಂಧೀಜಿ ಹಾಗೂ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ರವರ ಭಾವ ಚಿತ್ರವನ್ನು ಕೈಯಲ್ಲಿ ಹಿಡಿದು ದಾವಣಗೆರೆ ಮಹಾನಗರ ಪಾಲಿಕೆ ಮುಂಭಾಗವಿರುವ ಗಾಂಧೀಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅಲ್ಲಿಂದ ಜನತಾ ಬಜಾರ್ ರಸ್ತೆ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದವರೆಗೆ ಮೌನ ಪ್ರತಿಭಟನೆ ನಡೆಸಲಾಗುವುದು ಎಂದರು. ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ, ನೂತನ ಸಚಿವ ಕೆ.ಎಸ್.ಬಸವಂತಪ್ಪ ಹಾಗೂ ಯುವ ಶಾಸಕ ಸಮರ್ಥ್ ಶಾಮನೂರು ನೇತೃತ್ವದಲ್ಲಿ ಮೌನ ಪ್ರತಿಭಟನೆಯ ಮೆರವಣಿಗೆ ಪ್ರಾರಂಭವಾಗಲಿದ್ದು, ಜಿಲ್ಲಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಎಚ್.ಬಿ.ಮಂಜಪ್ಪ ಸೇರಿದಂತೆ ಹಲವು ಪ್ರಮುಖರು ಭಾಗಿಯಾಗಲಿದ್ದಾರೆ. ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರು, ಬ್ಲಾಕ್ ಅಧ್ಯಕ್ಷರು, ಮಾಜಿ ನಗರ ಪಾಲಿಕೆ ಸದಸ್ಯರು, ಜಿಲ್ಲಾ ಪಂಚಾಯತ್ ಸದಸ್ಯರು, ತಾಲೂಕು ಪಂಚಾಯತ್ ಸದಸ್ಯರು, ಗ್ರಾಮ ಪಂಚಾಯತ್ ಸದಸ್ಯರು,ಕಾಂಗ್ರೆಸ್ ಪಕ್ಷದ ಮುಂಚೂಣಿ ಘಟಕಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಎ.ನಾಗರಾಜ್, ಶಾಮನೂರು ಬಸವರಾಜ್, ರಘು ದೊಡ್ಮನಿ, ಪಾಮೇನಹಳ್ಳಿ ನಾಗರಾಜ್, ಜಗದೀಶ್, ಕಲ್ಲಳ್ಳಿ ರುದ್ರೇಶ್, ವರುಣ್ ಬೆಣ್ಣೆಹಳ್ಳಿ ಇತರರು ಇದ್ದರು.

# ಭದ್ರಾ ನಾಲೆಯಲ್ಲಿ ನೀರು ಹರಿಸಲು ಆಗ್ರಹ



ದಾವಣಗೆರೆ: ಜಿಲ್ಲೆಯಲ್ಲಿ ಕಳೆದ ಕೆಲವು ದಿನಗಳಿಂದ ಮಳೆ ಇಲ್ಲದೆ ತೀವ್ರ ಸ್ವರೂಪದ ಬರ ಎದುರಾಗಿದೆ. ಬಿರು ಬಿಸಿಲಿನ ತಾಪಮಾನ ಬೇಸಿಗೆಗಿಂತ ಜೋರಾಗಿದ್ದು, 35 ಡಿಗ್ರಿ ದಾಖಲಾಗಿದೆ. ಮಳೆ ನಂಬಿ ಬಿತ್ತಿದ ಬೆಳೆಗಳು ಒಣಗುತ್ತಿವೆ. ಆದ್ದರಿಂದ ಕೆರೆ ಕಟ್ಟೆ ಹಳ್ಳ ಕೊಳ್ಳಗಳನ್ನು ತುಂಬಿಸಿಕೊಳ್ಳಲು ಭದ್ರಾ ಜಲಾಶಯದ ನೀರನ್ನು ಕಾಲುವೆಗಳಿಗೆ ಈ ತಿಂಗಳ ಅಂತ್ಯದವರೆಗೆ ಹರಿಸಬೇಕು ಎಂದು ಜಿಲ್ಲಾ ರೈತರ ಒಕ್ಕೂಟದ ಅಧ್ಯಕ್ಷ ಕೋಳೆನಹಳ್ಳಿ ಬಿ.ಎಂ.ಸತೀಶ್ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ತಿಂಗಳಲ್ಲಿ ಒಂದೆರಡು ಸಲ ಮಳೆ ಬರುತ್ತದೆ. ಬೆಳೆದ ತೋಟಗಳ ನಿರ್ವಹಣೆ ಆಗುತ್ತದೆ ಎಂದು ನಂಬಿದ ರೈತರು ತೀವ್ರ ಬಿರುಬಿಸಿಲಿನ ತಾಪಮಾನದಿಂದ ಕಂಗಾಲಾಗಿದ್ದಾರೆ. ಜಿಲ್ಲೆಯಲ್ಲಿ ತೀವ್ರ ಬರದ ವಾತಾವರಣ ಇದ್ದು, ಅಂತರ್ಜಲ ಮಟ್ಟ ಕುಸಿಯುತ್ತಿದೆ. ಸೂಪರ್ ಎಲ್ ನಿನೊ ಎಫೆಕ್ಟ್ ತೀವ್ರವಾಗಿದೆ. ರೈತರು ದಿಕ್ಕು ತೋಚದೇ ಕಂಗೆಟ್ಟಿದ್ದಾರೆ. ಜಲಾಶಯದಲ್ಲಿ ನೀರು ಸಂಗ್ರಹ ಉಳಿಸಿಕೊಂಡು ಬೇಸಿಗೆ ಹಂಗಾಮಿನಲ್ಲಿ ಜನವರಿ ಮೊದಲ ವಾರದಿಂದ ಮೇ ತಿಂಗಳ ಅಂತ್ಯದವರೆಗೆ ನೀರು ಹರಿಸಿದ್ರೆ ಬೆಳೆ ಬೆಳೆಸಿಕೊಳ್ಳಲು ಮತ್ತು ತೋಟಗಳ ನಿರ್ವಹಣೆಗೆ ಅನುಕೂಲವಾಗುತ್ತದೆ ಎಂದು ಬಹುತೇಕ ರೈತರ ಅಪೇಕ್ಷೆ ಆಗಿತ್ತು. ಆದರೆ ಕೋಟೆ ನಾಡು ಚಿತ್ರದುರ್ಗ ಬರದ ನಾಡಿಗೆ ನಾನು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ 100 ದಿನಗಳೊಳಗೆ ನೀರು ಹರಿಸಿದೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಲು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಭದ್ರಾ ಜಲಾಶಯದಿಂದ ಭದ್ರಾ ಮೇಲ್ದಂಡೆಗೆ ನೀರು ಹರಿಸಿದರು. ತುಂಗಾ ನದಿಯಿಂದ ಭದ್ರಾ ಜಲಾಶಯಕ್ಕೆ 17.40 ಟಿಎಂಸಿ ನೀರು ಲಿಫ್ಟ್ ಮಾಡಿ ಹರಿಸಿದ ನಂತರ ಭದ್ರಾ ಮೇಲ್ದಂಡೆಗೆ ನೀರು ಹರಿಸಬೇಕಾಗಿತ್ತು. ಆದರೆ ಜಿಲ್ಲೆಯ ರೈತರ ಹಿತಾಸಕ್ತಿ ಮರೆತು ಸರ್ಕಾರ ನಡೆದಿದೆ ಎಂದು ಸತೀಶ್ ಹೇಳಿದ್ದಾರೆ.

# ವ್ಯವಹಾರ ಜ್ಞಾನದ ಜೊತೆಗೆ ಸಂಸ್ಕಾರ ಮುಖ್ಯ ಡಾ.ಭೀಮಾಶಂಕರ ಜೋಷಿ




ದಾವಣಗೆರೆ: ಶಿಕ್ಷಣ ಎಂದರೆ ವಿದ್ಯಾರ್ಥಿಗಳ ಮನಸಿನೊಳಗೆ ಸುಪ್ತ ಪ್ರತಿಭೆಯನ್ನು ಹೊರ ತೆಗೆಯುವುದೇ ಆಗಿದೆ. ವಿದ್ಯಾರ್ಥಿಗಳು ಅಂಕಗಳನ್ನು ಗಳಿಸುವುದರ ಜೊತೆಗೆ ವ್ಯವಹಾರ ಜ್ಞಾನ ಮುಖ್ಯ. ಅದರ ಜೊತೆಗೆ ಸಂಸ್ಕಾರವು ಬಹಳ ಮುಖ್ಯವಾಗಬೇಕು ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾದ ಸಹಾಯಕ ಪ್ರಾಧ್ಯಾಪಕ ಡಾ.ಭೀಮಾಶಂಕರ ಜೋಷಿ ಹೇಳಿದರು.

ನಗರದ ಎ.ಆರ್.ಎಂ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ಆಯೋಜಿಸಲಾಗಿದ್ದ 2026-27ನೇ ಶೈಕ್ಷಣಿಕ ಸಾಲಿನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಜೀವನದಲ್ಲಿ ಶಿಕ್ಷಣ ಮತ್ತು ಸಂಸ್ಕಾರ ಕಲಿತವರು ಎಲ್ಲಿಯೂ ಎಡವುದಿಲ್ಲ ಮತ್ತು ಕೆಡುವುದಿಲ್ಲ ಎಂದರು.

ಇಂದು ಎಲ್ಲರೊಳಗೂ ಮೊಬೈಲ್ ಬಳಕೆ ಗೀಳು ಅತಿಯಾಗಿದೆ. ಅದರಿಂದ ಒಳ್ಳೆಯ ಜ್ಞಾನವನ್ನು ಪಡೆಯಬೇಕು. ನಮ್ಮ ನಡುವೆ ಇಂದು ಮಾನವೀಯ ಸಂಬಂಧಗಳು ಮರೆಯಾಗುತ್ತವೆ. ಜೀವನದಲ್ಲಿ ಸಂಸ್ಕಾರವನ್ನು ಕಲಿತರೆ ಏನನ್ನಾದರೂ ಗೆಲ್ಲಬಹುದು ಮತ್ತು ಗಳಿಸಬಹುದು. ಜೀವನದಲ್ಲಿ ಸುಳ್ಳು ಕ್ಷಣಿಕ ಸುಖ ನೀಡುತ್ತದೆ. ಸತ್ಯ ಜೀವನವನ್ನು ಸರಿ ಮಾರ್ಗದಲ್ಲಿ ನಡೆಸುತ್ತದೆ. ವಿದ್ಯಾರ್ಥಿಗಳ ಯಶಸಿನ ಗುಟ್ಟು ಸತತ ಪ್ರಯತ್ನದಿಂದ ಮಾತ್ರ ಸಾಧ್ಯ ಎಂದರು.

ಈ ವೇಳೆ ಶ್ರೀ ದೇವರಾಜ್ ಅರಸ್ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಎಲ್.ಭರತ್ ಅಧ್ಯಕ್ಷತೆ ವಹಿಸಿದ್ದರು. ಆಡಳಿತಾಧಿಕಾರಿ ಸೋಮಶೇಖರ ಬಿ.ಕಿಚಿಡಿ, ಕಾಲೇಜು ಪ್ರಾಂಶುಪಾಲ ಕಾಡಜ್ಜಿ ಶಿವಪ್ಪ, ಎಸ್‌ಎಲ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಆರ್.ಕುಮಾರನಾಯ್ಕ, ಡಿ.ಅಂಜಿನಪ್ಪ, ಹೆಚ್.ಶಾಂತನಾಯ್ಕ, ಡಾ.ಬಿ.ಸಿ.ರಾಕೇಶ್, ಎಸ್.ಬಿ.ಮನೋಹರ, ಮೊಹಮ್ಮದ್ ರಿಯಾಜ್, ಬಸವರಾಜ ದಮ್ಮಳಿ, ಟಿ.ಎನ್. ಮೌನೇಶ್ವರ, ಡಾ.ಜಿ.ಎಸ್.ಮಧುಮಾಲತಿ, ಮಮತ, ಪೂಜಾ, ಗಣೇಶ, ಎಂ.ಎಸ್. ಮಂಜಳ, ಜಿ.ಸುಮಾ, ಗೀತಾ ಪಾಟೀಲ, ಷಣ್ಮುಖ, ಫಕ್ಕೀರಪ್ಪ ಶಂಭುಲಿಂಗಪ್ಪ, ಡಿ.ಚಂದ್ರಪ್ಪ ಇತರರು ಇದ್ದರು.

# ಎಸ್ಸಿ, ಎಸ್ಟಿ ಕುಂದು ಕೊರತೆ ಸಭೆ ಆಯೋಜಿಸಲಿ

ಹರಿಹರ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹರಿಹರ ತಾಲ್ಲೂಕು ಮಟ್ಟದ ಕುಂದು ಕೊರತೆ ಸಭೆ ನಡೆಸಲು ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಹರಿಹರ ತಾಲ್ಲೂಕು ಸಂಚಾಲಕ ಪಿ.ಜೆ.ಮಹಾಂತೇಶ್ ಆಗ್ರಹಿಸಿದ್ದಾರೆ.

ಈ ಹಿಂದೆ ಪ್ರತಿ ಮೂರು ತಿಂಗಳಿಗೊಮ್ಮೆ ಸಮಾಜ ಕಲ್ಯಾಣ ಇಲಾಖೆಯಿಂದ ಎಸ್.ಸಿ., ಎಸ್.ಟಿ. ಕುಂದುಕೊರತೆ ಸಭೆಗಳನ್ನು ನಡೆಸಲಾಗುತ್ತಿತ್ತು. ಆ ಸಭೆಗಳಲ್ಲಿ ಈ ತಳ ಸಮುದಾಯದ ಮುಖಂಡರು ಭಾಗವಹಿಸಿ ತಮ್ಮ ಸಮುದಾಯದ ಜನ ಸಾಮಾನ್ಯರು ನಿತ್ಯ ಬದುಕಿನಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ತಾಲ್ಲೂಕು ಮಟ್ಟದ ವಿವಿಧ ಇಲಾಖಾಧಿಕಾರಿಗಳ ಮುಂದೆ ಪ್ರಸ್ತಾಪಿಸಿ ಪರಿಹಾರವನ್ನು ಪಡೆಯುತ್ತಿದ್ದರು.

ಈ ಹಿಂದೆ 09-01-2022 ರಂದು ಇಂತಹ ಸಭೆ ನಡೆಸಿದ್ದು ಬಿಟ್ಟರೆ ಈವರೆಗೆ ಸಭೆ ಕರೆದಿರುವುದಿಲ್ಲ. ಕೋವಿಡ್ ಹಾಗೂ ಚುನಾವಣೆಗಳ ಕಾರಣವನ್ನು ಮುಂದಿಟ್ಟು ಕಳೆದ 4 ವರ್ಷ 8 ನಾಲ್ಕು ತಿಂಗಳಿಂದ ಸಭೆಗಳನ್ನು ನಡೆಸಿರುವುದಿಲ್ಲ. ರಾಜಕೀಯ ಪಕ್ಷಗಳು, ಜನಪ್ರತಿನಿಧಿಗಳು, ವಿವಿಧ ಇಲಾಖಾಧಿಕಾರಿಗಳು ಎಸ್ಸಿ, ಎಸ್ಟಿ ಜನ ಸಮುದಾಯದವರ ಹಕ್ಕುಗಳ ಸಂರಕ್ಷಣೆ ಬಗ್ಗೆ ಪುಂಖಾನುಪುಂಖವಾಗಿ ಆಡುವ ಮಾತು ಕೇವಲ ಮೊಸಳೆ ಕಣ್ಣೀರು ಎಂಬುದು ಇಲ್ಲಿ ಬಯಲಾಗಿದೆ.

ಇಂತಹ ಸಭೆಗಳು ತಾಲ್ಲೂಕು ಮಟ್ಟದ ಜೊತೆಗೆ ಹೋಬಳಿ ಹಾಗೂ ಗ್ರಾಮ ಪಂಚಾಯ್ತಿ ಮಟ್ಟದಲ್ಲೂ ನಿಯಮಿತವಾಗಿ ನಡೆಸಬೇಕು. ಒಂದೊಂದು ಪ್ರದೇಶಕ್ಕೆ ತಳ ಸಮುದಾದವರ ಸಮಸ್ಯೆಗಳು ವಿಭಿನ್ನವಾಗಿರುವ ಕಾರಣ ಈ ಸಭೆಗಳು ಗ್ರಾಮೀಣ ಭಾಗದಲ್ಲೂ ಆಯೋಜಿಸುವ ಅಗತ್ಯವಾಗಿದೆ ಎಂದು ಪ್ರತಿಪಾದಿಸಿದ್ದಾರೆ.

ಜಿಲ್ಲಾಧಿಕಾರಿಗಳು, ತಹಶೀಲ್ದಾರರು, ಸಮಾಜ ಕಲ್ಯಾಣಾಧಿಕಾರಿಗಳು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ಹಾಗೂ ಜನಪ್ರತಿನಿಧಿಗಳು ಚರ್ಚಿಸಿ ಆದಷ್ಟು ಬೇಗನೆ ಈ ಸಭೆಯನ್ನು ಆಯೋಜಿಸಬೇಕೆಂದು ಪತ್ರಿಕಾ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಆದಿ ಜಾಂಬವ ಅಭಿವೃದ್ಧಿ ನಿಗಮದಿಂದ ಈ ಮುಂಚೆ ಹೆಚ್ಚಿನ ಫಲಾನುಭವಿಗಳನ್ನು ಆಯ್ಕೆ ಮಾಡಿ ಸ್ವ ಉದ್ಯೋಗಕ್ಕೆ ಸಬ್ಸಿಡಿ ಸಾಲ, ನೇರ ಸಾಲದಂತಹ ಸೌಲಭ್ಯಗಳನ್ನು ನೀಡಲಾಗುತ್ತಿತ್ತು. ಆದರೆ ಈಗಿನ ಸರ್ಕಾರವು ಅನುದಾನ ಕಡಿತ ಮಾಡಿ ತಾಲ್ಲೂಕಿಗೆ 1ರಿಂದ 4 ಫಲಾನುಭವಿಗಳಿಗೆ ಮಾತ್ರ ಸೌಲಭ್ಯ ಸಿಗುತ್ತಿದೆ. ನಿಗಮಕ್ಕೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕೆಂದೂ ಆಗ್ರಹಿಸಿದ್ದಾರೆ.

# ಅನಾಮಧೇಯ ಶವ ಪತ್ತೆ

ದಾವಣಗೆರೆ: ಹದಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸೆ.6 ರಂದು ರಾತ್ರಿ 9.30ಕ್ಕೆ ನಾಗಮ್ಮ ಕೇಶವಮೂರ್ತಿ ಬಡಾವಣೆಯ ಆಯುಶ್ಮಾನ್ ಆಸ್ಪತ್ರೆ ಹತ್ತಿರದ ಭದ್ರಾ ಕಾಲುವೆಯ 10ನೇ ಉಪ ನಾಲೆಯಲ್ಲಿ ಸುಮಾರು 45 ವರ್ಷದ ಮಹಿಳೆಯ ಅನಾಮಧೇಯ ಶವ ಪತ್ತೆಯಾಗಿರುತ್ತದೆ. ವ್ಯಕ್ತಿಯ ಚಹರೆ ವಿವರ: 5.2 ಅಡಿ ಎತ್ತರ, ದುಂಡು ಮುಖ, ದೃಢವಾದ ಮೈಕಟ್ಟು, ಕಪ್ಪು ಬಿಳಿ ತಲೆ ಕೂದಲು, ಕೆಂಪು ಬಣ್ಣದ ಬ್ಲಾಸ್, ಕಪ್ಪು ಬಣ್ಣದ ಲಂಗ ಧರಿಸಿರುತ್ತಾರೆ. ಬಲಗೈಯಲ್ಲಿ ಪ್ರೇಮವತಿ ಅಂತ ಅಚ್ಚೆ ಇರುತ್ತದೆ ವಾರಸುದಾರರು ಪತ್ತೆಯಾದಲ್ಲಿ ಠಾಣೆಗೆ ತಿಳಿಸಬೇಕೆಂದು ಪೊಲೀಸ್ ಉಪ ನಿರೀಕ್ಷಕರು ತಿಳಿಸಿದ್ದಾರೆ.

# ಪಾವಗಡದಲ್ಲಿ ನಕ್ಸಲ್ ಚಟುವಟಿಕೆ ದೃಢಪಟ್ಟರೆ ಎಎನ್‌ಎಫ್ ನಿಯೋಜನೆ

ಬೆಂಗಳೂರು: ತುಮಕೂರು ಜಿಲ್ಲೆಯ ಪಾವಗಡದಲ್ಲಿ ನಕ್ಸಲ್ ಚಟುವಟಿಕೆಗೆ ಸಂಬಂಧಿಸಿದ ವರದಿಗಳು ದೃಢಪಟ್ಟರೆ ಹೆಚ್ಚುವರಿ ಪಡೆಗಳನ್ನು ನಿಯೋಜಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಶುಕ್ರವಾರ ಹೇಳಿದ್ದಾರೆ.

ಪಾವಗಡದಲ್ಲಿ ನಕ್ಸಲ್ ಚಟುವಟಿಕೆಗೆ ಸಂಬಂಧಿಸಿದ ಪೋಸ್ಟರ್‌ಗಳು ಕಾಣಿಸಿಕೊಂಡಿರುವ ವರದಿಗಳಿಗೆ ಪ್ರತಿಕ್ರಿಯಿಸಿದ ಅವರು, ಈ ಬೆಳವಣಿಗೆಯನ್ನು ಗಮನಿಸಿದ್ದು, ಶುಕ್ರವಾರ ತುಮಕೂರು ಜಿಲ್ಲೆಗೆ ಭೇಟಿ ನೀಡುವ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯೊಂದಿಗೆ ಈ ಕುರಿತು ಚರ್ಚಿಸುವುದಾಗಿ, ಪಾವಗಡದಲ್ಲಿ ನಕ್ಸಲ್ ಚಟುವಟಿಕೆ ಇರುವುದು ದೃಢಪಟ್ಟರೆ, ಹೆಚ್ಚುವರಿ ಪಡೆಗಳನ್ನು ನಿಯೋಜಿಸಲಾಗುವುದು ಎಂದು ತಿಳಿಸಿದರು.

ಕರ್ನಾಟಕವನ್ನು ನಕ್ಸಲ್ ಮುಕ್ತ ರಾಜ್ಯ ಎಂದು ಘೋಷಿಸಲಾಗಿದ್ದರೂ, ನಕ್ಸಲ್ ನಿಗ್ರಹ ಪಡೆ ಅನ್ನು ಸಂಪೂರ್ಣವಾಗಿ ವಿಸರ್ಜಿಸಲಾಗಿಲ್ಲ. ಈ ಪಡೆಯ ಅರ್ಧದಷ್ಟು ಸಿಬ್ಬಂದಿಯನ್ನು ಕೋಮು ಗಲಭೆಗಳನ್ನು ನಿಯಂತ್ರಿಸುವ ಉದ್ದೇಶದಿಂದ ವಿಶೇಷ ಕಾರ್ಯಾಚರಣೆ ಪಡೆಗೆ ಪರಿವರ್ತಿಸಲಾಗಿದ್ದು, ಉಳಿದ ಸಿಬ್ಬಂದಿ ನಕ್ಸಲ್ ನಿಗ್ರಹ ಘಟಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಎಂದು ಹೇಳಿದರು.

# ಸ್ವಸ್ತಿಕ್ ಗ್ರೂಪ್‌ನಿಂದ ಸಮುದ್ರ ಮಂಥನ ತ್ರಿಡಿ ಶೋ

ದಾವಣಗೆರೆ: ಸ್ವಸ್ತಿಕ್ ಗ್ರೂಪ್ ವತಿಯಿಂದ ಮಂಡಿಪೇಟೆಯಲ್ಲಿ ಆಯೋಜಿಸಲಾಗಿರುವ 53ನೇ ವರ್ಷದ ಶ್ರೀ ವಿನಾಯಕ ಮಹೋತ್ಸವದ ಅಂಗವಾಗಿ ಸೆಪ್ಟೆಂಬರ್ 14ರಿಂದ 24ರವರೆಗೆ ಪ್ರತಿದಿನ ಸಂಜೆ 6 ರಿಂದ ರಾತ್ರಿ 10 ಗಂಟೆಯವರೆಗೆ 'ಸಮುದ್ರ ಮಂಥನ' ತ್ರಿಡಿ ಶೋ ಪ್ರದರ್ಶನ ಕಾರ್ಯಕ್ರಮ ನಡೆಯಲಿದೆ.

ಈ ಬಾರಿಯ ವಿನಾಯಕ ಮಹೋತ್ಸವದಲ್ಲಿ 'ಸಮುದ್ರ ಮಂಥನ' ತ್ರಿಡಿ ಶೋ ವಿಶೇಷ ಆಕರ್ಷಣೆಯಾಗಿರಲಿದ್ದು, ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿರಲಿದೆ. ಸೆಪ್ಟೆಂಬರ್ 25ರ ಶುಕ್ರವಾರದಂದು ಶ್ರೀ ಸ್ವಾಮಿಯ ವಿಸರ್ಜನೆ ನೆರವೇರಲಿದ್ದು, ಅಂದು ಮಧ್ಯಾಹ್ನ ಸಾರ್ವಜನಿಕರಿಗೆ ವಿಶೇಷ ಪ್ರಸಾದ ವಿನಿಯೋಗ ವ್ಯವಸ್ಥೆ ಮಾಡಲಾಗಿದೆ. ಎಲ್ಲಾ ಕಾರ್ಯಕ್ರಮಗಳಲ್ಲಿ ಸರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ಸಂಘಟಕರು ಕೋರಿದ್ದಾರೆ.

ಗೀತಾಂಜಲಿ
DOLBY DIGITAL dts
ದಿನ 4 ಆಟಗಳು
11-09-2026 ರಿಂದ ಪ್ರಾರಂಭ
ಕನ್ನಡ ಚಿತ್ರ
ಸಮಯ: ಬೆ: 11ಕ್ಕೆ, ಮ: 2ಕ್ಕೆ, ಸಂ: 6ಕ್ಕೆ, ರಾ: 9ಕ್ಕೆ



ಅಶೋಕ
DOLBY DIGITAL dts
ದಿನ 4 ಆಟಗಳು
ಜನ ಭರಿತ 4ನೇ ವಾರ
ಕನ್ನಡ-ತೆಲುಗು-ಚಿತ್ರ
ticket avabale bookmyshow
ಸಮಯ: ಬೆಳಿಗ್ಗೆ 11ಕ್ಕೆ ಮ:2ಕ್ಕೆ, ಸಂಜೆ: 6ಕ್ಕೆ, ರಾತ್ರಿ: 9ಕ್ಕೆ:



ವಸಂತ 4K
DOLBY ATMOS
Tickets are available in bookmyshow
ದಿನ 4 ಆಟಗಳು
11-09-2026ರಿಂದ ಪ್ರಾರಂಭ
ತೆಲುಗು-ಚಿತ್ರ
ಸಮಯ: ಬೆಳಿಗ್ಗೆ 11ಕ್ಕೆ ಮ:2ಕ್ಕೆ, ಸಂಜೆ: 6ಕ್ಕೆ, ರಾತ್ರಿ: 9ಕ್ಕೆ:


# ಕುಡತಿನಿಯಲ್ಲಿ ಮೊಳಗಿದ ಬಿಜೆಪಿ ಜನಾಕ್ರೋಶ





ಕೊಟ್ಟೂರು/ಬಳ್ಳಾರಿ: ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಹಮ್ಮಿಕೊಂಡಿರುವ 'ಬಳ್ಳಾರಿ ಚಲೋ' ಪಾದಯಾತ್ರೆ ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಭರ್ಜರಿ ಜನಬೆಂಬಲದೊಂದಿಗೆ ಸಾಗಿತು. ಕುಡತಿನಿಯಲ್ಲಿ ನಡೆದ ಪಾದಯಾತ್ರೆಯಲ್ಲಿ ಸಾವಿರಾರು ಬಿಜೆಪಿ ಕಾರ್ಯಕರ್ತರ ಘೋಷಣೆ, ಉತ್ಸಾಹ ಹಾಗೂ ಜನಾಕ್ರೋಶ ಗಮನ ಸೆಳೆಯಿತು.

ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಮಾಜಿ ಸಚಿವ ಬಿ. ಶ್ರೀರಾಮುಲು ಅವರಿಗೆ ವಿಜಯನಗರ ಜಿಲ್ಲೆಯ ಯುವ ಮುಖಂಡ ಪಾಟೀಲ್ ಕಲ್ಲೇಶ್ ಕೊಟ್ಟೂರು ನೇತೃತ್ವದಲ್ಲಿ ಭವ್ಯ ಸ್ವಾಗತ ಕೋರಿ ಅದ್ಧೂರಿ ಸನ್ಮಾನ ಸಲ್ಲಿಸಲಾಯಿತು.

**ಗುರುಬಸವೇಶ್ವರರ ಭಾವಚಿತ್ರ ನೀಡಿ ಗೌರವ:** ಕೊಟ್ಟೂರಿನ ಆರಾಧ್ಯ ದೈವ ಶ್ರೀ ಗುರುಬಸವೇಶ್ವರ ಸ್ವಾಮಿಯ ಭಾವಚಿತ್ರವನ್ನು ವಿಜಯೇಂದ್ರ ಹಾಗೂ ಶ್ರೀರಾಮುಲು ಅವರಿಗೆ ನೀಡಿ ಗೌರವಿಸಲಾಯಿತು. ಕೊಟ್ಟೂರಿನ ಧಾರ್ಮಿಕ ಪರಂಪರೆಯ ಪ್ರತೀಕವಾದ ಗುರುಬಸವೇಶ್ವರರ ಸನ್ನಿಧಿಯ ಆಶೀರ್ವಾದದೊಂದಿಗೆ ಜನಪರ ಹೋರಾಟಕ್ಕೆ ಮತ್ತಷ್ಟು ಬಲ ದೊರೆಯಲಿ ಎಂಬ ಆಶಯ ವ್ಯಕ್ತವಾಯಿತು.

ಕಾರ್ಯಕ್ರಮದಲ್ಲಿ ನಗರ ಘಟಕದ ಅಧ್ಯಕ್ಷ ಅಂಗಡಿ ಪಂಪಾಪತಿ, ಪ್ರಮುಖ ಮುಖಂಡರಾದ ಬಟನ್ ಬಸವರಾಜ್, ಯೋಗೇಶ್, ಸುನಿಲ್ ಕುಮಾರ್ ಸೇರಿದಂತೆ ವಿಜಯನಗರ ಹಾಗೂ ಕೊಟ್ಟೂರು ಭಾಗದ ನೂರಾರು ಯುವ ನಾಯಕರು, ಬಿಜೆಪಿ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಪಾಲ್ಗೊಂಡಿದ್ದರು. ಪಾದಯಾತ್ರೆ ಬಳ್ಳಾರಿ ನಗರದಲ್ಲಿ ಅಂತ್ಯಗೊಂಡಿತು.

## ಕುಸಿದ ಚಿನ್ನ-ಬೆಳ್ಳಿ ದರ

ಬೆಂಗಳೂರು: ಗೌರಿ ಗಣೇಶ ಹಬ್ಬಕ್ಕೂ ಮುನ್ನ ಚಿನ್ನ ಮತ್ತು ಬೆಳ್ಳಿ ದರದಲ್ಲಿ ಇಳಿಕೆಯಾಗಿದೆ. ಒಂದು ಕೆ.ಜಿ. ಬೆಳ್ಳಿ ದರದಲ್ಲಿ 10 ಸಾವಿರ ರೂ. ಕುಸಿತವಾಗಿದ್ದರೆ, ಚಿನ್ನದ ದರ ಒಂದು ಗ್ರಾಂಗೆ 262 ರೂ.ವರೆಗೆ ಇಳಿಕೆಯಾಗಿದ್ದು, ಗ್ರಾಹಕರಿಗೆ ಕೊಂಚ ಸಮಾಧಾನ ತಂದಿದೆ. ಕಳೆದ ಎಂಟು ಹತ್ತು ದಿನಗಳಿಂದ ಏರಿಳಿತ ಕಾಣುತ್ತಿರುವ ಚಿನ್ನ ಮತ್ತು ಬೆಳ್ಳಿ ದರಗಳು ಮತ್ತೆ ಕುಸಿದಿವೆ. ಆಗಸ್ಟ್‌ನಲ್ಲಿ ಏರಿಳಿತ ಕಂಡಿದ್ದರೂ, ಸೆಪ್ಟೆಂಬರ್‌ನಲ್ಲಿ ಚಿನ್ನ ಬೆಳ್ಳಿ ದರಗಳು ಹೆಚ್ಚಿನ ಮಟ್ಟದಲ್ಲಿಯೇ ಮುಂದುವರಿದಿವೆ.

# ಸರ್ಕಾರಿ ಶಾಲೆಗೆ ಪ್ರಯೋಗಾಲಯ ಬೇಕು




ಹರಿಹರ : ಹರಿಹರದ ಗುತ್ತೂರು ಸರ್ಕಾರಿ ಪ್ರೌಢಶಾಲೆಗೆ ಹೈಟೆಕ್ ವಿಜ್ಞಾನ ಪ್ರಯೋಗಾಲಯ ಹಾಗೂ ಡಿಜಿಟಲ್ ಬೋರ್ಡ್ ಒದಗಿಸಲು ಕೋರಿ ಶಾಲೆಗೆ ಶುಕ್ರವಾರ ಭೇಟಿ ನೀಡಿದ್ದ ಕೇರ್ ಟ್ರಸ್ಟ್ ಪದಾಧಿಕಾರಿಗಳಾದ ಆನಂದ್, ಗುರುರಾಜ್, ಪರಶುರಾಮ ಬಡ್ಡಿ, ಸುನಿಲ್ ಅವರಿಗೆ ಮನವಿ ಪತ್ರ ನೀಡಲಾಯಿತು. ಎಸ್.ಡಿ.ಎಂ.ಸಿ ಅಧ್ಯಕ್ಷ ನಾಗರಾಜ್ ಬಿ.ಜೆ., ಮುಖ್ಯ ಶಿಕ್ಷಕ ನಾಯ್ಕ್ ಎಂ. ಆರ್., ಸಾಮಾಜಿಕ ಕಾರ್ಯಕರ್ತರಾದ ಐರಣಿ ಹನುಮಂತಪ್ಪ, ಅಣ್ಣಪ್ಪ ಅಜ್ಜೇರ್ ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.

# ಎನ್. ಸತೀಶ್ ಕುಮಾರ್ ಪೂರ್ವ ವಲಯದ ಐಜಿಪಿ



ದಾವಣಗೆರೆ: ರಾಜ್ಯ ಸರ್ಕಾರವು ಹಿರಿಯ ಐಪಿಎಸ್ ಅಧಿಕಾರಿಗಳ ವರ್ಗಾವಣೆ ಮಾಡಿದ್ದು, ಬೆಂಗಳೂರಿನ ಪೊಲೀಸ್ ಪ್ರಧಾನ ಕಚೇರಿ-1ರ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್ ಆಗಿ ಸೇವೆ ಸಲ್ಲಿಸುತ್ತಿದ್ದ ಎನ್. ಸತೀಶ್ ಕುಮಾರ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ದಾವಣಗೆರೆ ಪೂರ್ವ ವಲಯದ ನೂತನ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್ ಆಗಿ ವರ್ಗಾಯಿಸಿ ಆದೇಶಿಸಿದೆ.

ಡಾ.ಬಿ.ಆರ್.ರವಿಕಾಂತೇಗೌಡ ಅವರ ನಿವೃತ್ತಿಯಿಂದಾಗಿ ಖಾಲಿಯಿದ್ದ ದಾವಣಗೆರೆ ಪೂರ್ವ ವಲಯದ ಐಜಿಪಿ ಹುದ್ದೆಗೆ 2003ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾದ ಎನ್. ಸತೀಶ್ ಕುಮಾರ್ ಅವರನ್ನು ಮುಂದಿನ ಆದೇಶದವರೆಗೆ ನಿಯೋಜನೆಗೊಳಿಸಿ ರಾಜ್ಯ ಸರ್ಕಾರ ಅಧಿಕೃತ ಸೂಚನೆ ಹೊರಡಿಸಿದೆ.

ಕರ್ನಾಟಕ ಕೆಡರ್‌ನ 2003ರ ಬ್ಯಾಚ್‌ನ ಹಿರಿಯ ಐಪಿಎಸ್ ಅಧಿಕಾರಿ ಎನ್. ಸತೀಶ್ ಕುಮಾರ್ ಪ್ರಸ್ತುತ ಬೆಂಗಳೂರಿನ ರಾಜ್ಯ ಪೊಲೀಸ್ ಪ್ರಧಾನ ಕಚೇರಿಯಲ್ಲಿ ಐಜಿಪಿ ಆಗಿ ಕಾರ್ಯನಿರ್ವಹಿಸುತ್ತಿದ್ದರು.

ಮೂಲತಃ ತಮಿಳುನಾಡಿನವರಾದ ಇವರು ಯುಪಿಎಸ್‌ಸಿ ನಾಗರಿಕ ಸೇವಾ ಪರೀಕ್ಷೆಯ ಮೂಲಕ ನೇರ ಆಯ್ಕೆಯಾಗಿ 22 ಡಿಸೆಂಬರ್ 2003ರಂದು ಐಪಿಎಸ್ ಸೇವೆಗೆ ಸೇರ್ಪಡೆಯಾದರು.

# ಬಿ.ಪಿ.ಹರೀಶ್ ಕ್ಷಮೆ ಕೇಳದಿದ್ದರೆ ಮುತ್ತಿಗೆ

ದಾವಣಗೆರೆ: ಶಾಸಕ ಬಿ.ಪಿ.ಹರೀಶ್ ಅವರು ತಮ್ಮ ಅವಹೇಳನಕಾರಿ ಹೇಳಿಕೆಯನ್ನು ತಕ್ಷಣ ಹಿಂಪಡೆದು, ಕಾಂಗ್ರೆಸ್ ಪಕ್ಷಕ್ಕೆ, ಎಸ್.ಎಸ್. ಕುಟುಂಬದವರಿಗೆ ಹಾಗೂ ಸಾರ್ವಜನಿಕವಾಗಿ ಬಹಿರಂಗ ಕ್ಷಮೆ ಯಾಚಿಸಬೇಕು. ಇಲ್ಲವಾದರೆ ಅವರ ಕಚೇರಿ ಹಾಗೂ ಮನೆಗೆ ಮುತ್ತಿಗೆ ಹಾಕಲಾಗುವುದು ಎಂದು ಎಸ್.ಎಸ್.ಎಂ.ಯುವ ಬ್ರಿಗೇಡ್ ಎಚ್ಚರಿಸಿದೆ.

ಸುದ್ದಿಗೋಷ್ಠಿಯಲ್ಲಿ ಬ್ರಿಗೇಡ್‌ನ ಅಧ್ಯಕ್ಷ ಮುಜಾಹಿದ್ ಪಾಷ ಮಾತನಾಡಿ, ದಾವಣಗೆರೆಯ ಶೈಕ್ಷಣಿಕ, ಸಾಮಾಜಿಕ ಹಾಗೂ ಅಭಿವೃದ್ಧಿ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುವ ದಿ.ಡಾ.ಶಾಮನೂರು ಶಿವಶಂಕರಪ್ಪ ಅವರಂತಹ ಹಿರಿಯ ನಾಯಕನ ಬಗ್ಗೆ ಮಾತನಾಡುವಾಗ ಕನಿಷ್ಠ ರಾಜಕೀಯ ಸಂಸ್ಕಾರ ಮತ್ತು ಸಾರ್ವಜನಿಕ ಜವಾಬ್ದಾರಿ ಇರಬೇಕು. ಆದರೆ ಬಿ.ಪಿ. ಹರೀಶ್ ಅವರು ವೈಯಕ್ತಿಕವಾಗಿ ನಿಂದಿಸುವ ರೀತಿಯಲ್ಲಿ ಪದಗಳನ್ನು ಬಳಸಿರುವುದು ಖಂಡನೀಯ. ಕೂಡಲೇ ಬಿ.ಪಿ.ಹರೀಶ್ ಅವರು ಕ್ಷಮೆ ಕೇಳಬೇಕು ಇಲ್ಲವಾದರೆ ಅವರ ಕಚೇರಿ ಹಾಗೂ ಮನೆಗೆ ಮುತ್ತಿಗೆ ಹಾಕಲಾಗುವುದು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಆರೀಫ್, ವೀರೇಶ್, ಲಿಯಾಕತ್ ಅಲಿ, ಹರೀಶ್, ಪ್ರವೀಣ್ ಇತರರು ಇದ್ದರು.

# ಪಾವಗಡದಲ್ಲಿ ನಕ್ಸಲ್ ಚಟುವಟಿಕೆ ಪತ್ತೆ



ಬೆಂಗಳೂರು: ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ಶಂಕಿತ ನಕ್ಸಲ್ ಚಟುವಟಿಕೆಗಳು ಕಂಡು ಬಂದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಎಚ್ಚೆತ್ತುಕೊಂಡಿದ್ದು, ಹೆಚ್ಚಿನ ಪೊಲೀಸ್ ಬಂದೋಬಸ್ತ್ ನಿಯೋಜಿಸಲು ಮುಂದಾಗಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅವರು, ತುಮಕೂರು ಜಿಲ್ಲೆಯ ಪಾವಗಡದಲ್ಲಿ ನಕ್ಸಲರ ಹೆಸರಿನಲ್ಲಿ ಹಣಕ್ಕೆ ಬೇಡಿಕೆ ಇಡುವ ಪತ್ರವೊಂದು ಪತ್ತೆಯಾಗಿರುವುದು ನನ್ನ ಗಮನದಲ್ಲಿದೆ. ಇಂದು ತಾವು ತುಮಕೂರಿಗೆ ಭೇಟಿ ನೀಡುತ್ತಿದ್ದು, ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿ ಜೊತೆ ಚರ್ಚೆ ಮಾಡುತ್ತೇನೆ. ಒಂದು ವೇಳೆ ಪತ್ರದಲ್ಲಿರುವ ಬೆದರಿಕೆ ನಿಜವಾಗಿದ್ದರೆ ಹೆಚ್ಚಿನ ಪೊಲೀಸ್ ಬಂದೋಬಸ್ತನ್ನು ವ್ಯವಸ್ಥೆ ಮಾಡುವುದಾಗಿ ಹೇಳಿದರು.ಈ ಹಿಂದೆ ತಾವು ಗೃಹಸಚಿವರಾಗಿದ್ದಾಗ ನಕ್ಸಲರ ಶರಣಾಗತಿಯಾಗಿತ್ತು. ರಾಜ್ಯವನ್ನು ನಕ್ಸಲ್ ಮುಕ್ತ ಎಂದು ಘೋಷಿಸಲಾಗಿದೆ. ಈ ಮೊದಲು ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ನಕ್ಸಲ್ ನಿಗ್ರಹ ಪಡೆಯಲ್ಲಿ ಅರ್ಧದಷ್ಟು ಬಲವನ್ನು ಹಿಂಪಡೆದು, ವಿಶೇಷ ಕ್ರಿಯಾಪಡೆ ಎಂದು ರಚಿಸಿ ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಲ್ಲಿ ಶಾಂತಿ ಪಾಲನೆಗೆ ನಿಯೋಜಿಸಲಾಗಿದೆ.

ಇನ್ನೂ ಅರ್ಧದಷ್ಟು ನಕ್ಸಲ್ ನಿಗ್ರಹ ಪಡೆಯ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಕಾರ್ಕಳದಲ್ಲೇ ಇರಿಸಿದ್ದು, ತರಬೇತಿ ಮುಂದುವರೆಸಲಾಗಿದೆ. ಒಂದು ವೇಳೆ ಪಾವಗಡದಲ್ಲಿ ಪತ್ತೆಯಾಗಿರುವ ಪತ್ರದಲ್ಲಿ ನೈಜತೆ ಇದ್ದರೆ, ನಕ್ಸಲ್ ನಿಗ್ರಹ ಚಟುವಟಿಕೆಗಳನ್ನು ಹತ್ತಿಕ್ಕಲು ಕಾರ್ಕಳದ ಪಡೆಯನ್ನು ಪಾವಗಡದ ಕಡೆಗೆ ಸ್ಥಳಾಂತರಿಸಲಾಗುವುದು ಎಂದು ತಿಳಿಸಿದರು.

ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಗಂಗಾಸಾಗರ ಗ್ರಾಮದಲ್ಲಿನ ಕುಂಡ್ಲಭೂಷಪ್ಪ ಅವರ ಜಮೀನಿನಲ್ಲಿ ಕಾಮ್ರೆಡ್ ದೇವನ್ನ ದಳಂ ಹೆಸರಿನಲ್ಲಿ ಪತ್ರವೊಂದು ಪತ್ತೆಯಾಗಿದೆ. ಪೀಪಲ್, ಸವಾರ್ ಜನಶಕ್ತಿ ಪಕ್ಷದ ಹೆಸರನ್ನು ಬಳಸಿಕೊಳ್ಳಲಾಗಿದ್ದು, ಕನಕಲ ಬಂಡೆಯ ಉಪ್ಪಾರ ವೆಂಕಟೇಶ ಎಂಬುವರ ವಿರುದ್ಧ ರಾಜಕೀಯ ಪಿತೂರಿ ಮತ್ತು ದೌರ್ಜನ್ಯಗಳು ನಡೆಯುತ್ತಿವೆ. ಇದರ ಬಗ್ಗೆ ಹಲವು ಪ್ರಕರಣಗಳನ್ನು ದಾಖಲಿಸಲಾಗಿದೆ. ಅವುಗಳಿಂದ ಬಿಡುಗಡೆ ಪಡೆಯಲು ವಕೀಲರಿಗೆ 5 ಲಕ್ಷ ರೂ.ಗಳನ್ನು ನೀಡಬೇಕು ಎಂದು ತಿಳಿಸಲಾಗಿದೆ.

ಇದೇ ತಿಂಗಳ 16ರ ಒಳಗೆ ಹಣವನ್ನು ವಕೀಲರಿಗೆ ತಲುಪಿಸಬೇಕೆಂದು ಪತ್ರದಲ್ಲಿ ಸೂಚಿಸಲಾಗಿದ್ದು, ಇಲ್ಲವಾದರೆ ಪರಿಣಾಮ ನೆಟ್ಟಗಿರುವುದಿಲ್ಲ ಎಂದು ಎಚ್ಚರಿಕೆ ನೀಡಲಾಗಿದೆ. ಈ ಪತ್ರ ಸಂಚಲನ ಮೂಡಿಸಿದ್ದು ನಕ್ಸಲ್ ಮುಕ್ತ ಕರ್ನಾಟಕಕ್ಕೆ ಸವಾಲೊಡ್ಡುವಂತಿದೆ. ಒಂದು ವೇಳೆ ಕಿಡಿಗೇಡಿಗಳು ದುರುದ್ದೇಶಪೂರ್ವಕವಾಗಿ ಈ ರೀತಿ ಪತ್ರವನ್ನು ಸೃಷ್ಟಿಸಿ ಬೆದರಿಸುವ ತಂತ್ರ ಮಾಡಿರಬಹುದೇ ಎಂಬ ಅನುಮಾನಗಳು ಕೇಳಿಬರುತ್ತವೆ.

# ಧಾರ್ಮಿಕ ಕಾರ್ಯಕ್ರಮಗಳು ಜನರನ್ನು ಮಾನಸಿಕವಾಗಿ ಸದೃಢಗೊಳಿಸುತ್ತವೆ: ಪಿ.ಟಿ

ಹರಪನಹಳ್ಳಿ: ಧಾರ್ಮಿಕ ಕಾರ್ಯಕ್ರಮಗಳು ಜನರನ್ನು ಮಾನಸಿಕವಾಗಿ ಸದೃಢ ಗೊಳಿಸುತ್ತವೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ರಾಜ್ಯ ಘಟಕದ ಉಪಾಧ್ಯಕ್ಷ ಪಿ.ಟಿ.ಪರಮೇಶ್ವರ ನಾಯ್ಕ ತಿಳಿಸಿದ್ದಾರೆ. ಅವರು ನಗರದ ತೆಗ್ಗಿನಮಠದ ಸಭಾಂಗಣದಲ್ಲಿ ಆಯೋಜಿಸಿದ್ದ ಶ್ರಾವಣ ಸಂಜೆ ಕಾರ್ಯಕ್ರಮದ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಮೌಲ್ಯಗಳು ಕುಸಿದಿರುವ ಮಾನವೀಯತೆ ದೂರವಾಗುತ್ತಿರುವ ಇಂದಿನ ದಿನಗಳಲ್ಲಿ ಇಂತಹ ಧಾರ್ಮಿಕ ಕಾರ್ಯಕ್ರಮಗಳ ಅವಶ್ಯಕತೆ ಬಹಳಷ್ಟಿದೆ, ಮಾನವೀಯತೆಗಿಂತ ದೊಡ್ಡದು ಇನ್ನೊಂದಿಲ್ಲ ಎಂದು ನುಡಿದರು.

ಶ್ರಾವಣ ಶ್ರೇಷ್ಟವಾದ ಮಾಸ, ಪೂಜೆ ಪುನಸ್ಕಾರ ಮಾಡುತ್ತಾ ದೇವರ ಧ್ಯಾನದಲ್ಲಿ ತಲ್ಲೀನರಾಗುವ ಮಾಸ ಇದಾಗಿದೆ ಎಂದ ಅವರು ಪ್ರಕೃತಿ ವಿರುದ್ಧ ಇಂದು



ನಾವಿದ್ದೇವೆ ಎಂದು ಹೇಳಿದರು.

ಭಕ್ತರು ಹಾಗೂ ಮಠದ ಸಂಬಂಧ ಉತ್ತಮವಾಗಿರಬೇಕು ಎಂದು ಅವರು ಈ ಸಂದರ್ಭದಲ್ಲಿ ಅಭಿಪ್ರಾಯ ಪಟ್ಟರು. ಪ್ರಾಸ್ತಾವಿಕವಾಗಿ ಮಾತನಾಡಿದ ತೆಗ್ಗಿನಮಠ ಸಂಸ್ಥೆಯ ಕಾರ್ಯದರ್ಶಿ ಟಿ.ಎಂ. ಚಂದ್ರಶೇಖರಯ್ಯನವರು ಮಾನವನ ವಿಕಾಸಕ್ಕೆ, ಅಭಿದ್ಯೋಯಕ್ಕೆ ಬೆಳಕು ಚೆಲ್ಲಲು ವಿಶಿಷ್ಟವಾದ ವಿಚಾರಗಳ ಕುರಿತು ಕಳೆದ 9 ದಿನಗಳಿಂದ ಶ್ರಾವಣ ಸಂಜೆ ಕಾರ್ಯಕ್ರಮದಲ್ಲಿ ಉಪನ್ಯಾಸ ಕೊಡಿಸಲಾಯಿತು ಎಂದ ಅವರು ಕಾರ್ಯಕ್ರಮ ಯಶಸ್ವಿಯಾಗಿದ್ದಕ್ಕೆ ಸರ್ವರಿಗೂ ಧನ್ಯವಾದಗಳನ್ನು ಸಲ್ಲಿಸಿದರು.

ತೆಗ್ಗಿನಮಠದ ವರಸದ್ಯೋಜಾತ ಶಿವಾಚಾರ್ಯರು ಸಾನಿಧ್ಯ ವಹಿಸಿ ಭಕ್ತರಿಗೆ ಆಶೀರ್ವಚನ ನೀಡಿದರು. ಕೂಡ್ಲಿಗಿ ಹಿರೇಮಠದ ಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ಮನೋ ದೈಹಿಕ ರೋಗಗಳಿಗೆ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಕುರಿತು ಜನನಿ ಯೋಗ ಮತ್ತು ನ್ಯಾಚುರೋಪತಿ ಆಸ್ಪತ್ರೆಯ ಪ್ರಾಂಶುಪಾಲ ಡಾ.ರಾಜೇಶ ಪಾಡೇಕಲ್ ಉಪನ್ಯಾಸ ನೀಡಿದರು.

ಮುಖಂಡರಾದ ಶಶಿಧರ ಪೂಜಾರ, ಪಿ.ಎಲ್.ಪೋಮ್ಯನಾಯ್ಕ, ಪಿ.ಕೆ.ಎಂ.ನಾಗಲಿಂಗಯ್ಯ, ಬಿ.ಆರ್.ಪ್ರಭಾಕರ, ರವಿಶಂಕರ, ಪೆಂಡಕೂರು ಶ್ರೀಧರ, ಟಿ.ಎಂ.ಗುರುಬಸವರಾಜ, ಚಿಂದಿ ಗಿರೀಶ, ಟಿ.ಎಂ. ಕೊಟ್ರೇಶ, ಎಸ್.ಎಲ್.ಗುರುನಾಥ, ಗೌಳಿ ಪಾರ್ವತಮ್ಮ, ಹುಳ್ಳಿ ಕೊಟ್ರೇಶಪ್ಪ, ಶಿವಹಾದಿಮನಿ, ಕೊಟ್ಗಿ ವಿಶ್ವನಾಥ ಉಪಸ್ಥಿತರಿದ್ದರು.

ಸಿ.ಎಂ.ವಿರೇಶ ಸ್ವಾಗತಿಸಿದರೆ, ಸಿ.ಎಂ.ಕೊಟ್ರಯ್ಯ, ಡಿಎಚ್ ಎಂ ಮಡಿವಾಳ ಸ್ವಾಮಿ ನಿರೂಪಿಸಿದರು.

# ರಸ್ತೆಗಳ ಗುಂಡಿ, ಹಳ್ಳಗಳನ್ನು ಮುಚ್ಚದಿದ್ದರೆ ಹೈಕೋರ್ಟಿನಲ್ಲಿ ಪಿಐಎಲ್ ದಾಖಲು

ದಾವಣಗೆರೆ: ರಾಜ್ಯ ಸರ್ಕಾರ ಕೂಡಲೇ ರಾಜ್ಯದ ಎಲ್ಲಾ ರಸ್ತೆಗಳ ಗುಂಡಿ, ಹಳ್ಳಗಳನ್ನು ಮುಚ್ಚುವ ಕಾರ್ಯಕ್ಕೆ ಮುಂದಾಗದಿದ್ದಲ್ಲಿ ರಾಜ್ಯಪಾಲರಿಗೆ ದೂರು ನೀಡಿ, ಹೈಕೋರ್ಟ್‌ನಲ್ಲಿ ಪಿಐಎಲ್ ಕೇಸು ದಾಖಲು ಮಾಡಲಾಗುವುದು ಎಂದು ಸಾಮಾಜಿಕ ಅಭಿವೃದ್ಧಿ ರಂಗದ ಅಧ್ಯಕ್ಷ ಟಿ.ಎಲ್.ರಂಗನಾಥ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಸ್ತೆಗಳು ಹಾಳಾಗಿರುವ ಕಾರಣ ವಾಹನಗಳಲ್ಲಿ ಸಂಚರಿಸುವ ಜನರು ಗುಂಡಿಗಳಲ್ಲಿ ಬಿದ್ದು ಗಂಭೀರ ಗಾಯಗಳಾಗಿ ಶಾಶ್ವತ ಅಂಗವಿಕಲತೆ ಹಾಗೂ ಸಾವಿಗೀಡಾಗುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಕಳೆದ ಮೂರ್‍ನಾಲ್ಕೂ ವರ್ಷದಿಂದ ಮನವಿ ಮಾಡಿದರು ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದರು.




ಸರ್ಕಾರ ತಮ್ಮ ವೋಟ್ ಬ್ಯಾಂಕ್‌ಗಾಗಿ, ಅಧಿಕಾರಕ್ಕಾಗಿ ಮನಬಂದಂತೆ ಯೋಜನೆ ರೂಪಿಸುವ ಬದಲು ಸಾರ್ವಜನಿಕರು ಬೇಡುವ ಯೋಜನೆ, ಕೆಲಸಗಳನ್ನು ಮಾಡಬೇಕು. ಸಾರ್ವಜನಿಕರ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಯೋಜನೆ ಜಾರಿ ಮಾಡಬೇಕು ಎಂದು ಹೇಳಿದರು.

ವರ್ಷಕ್ಕೆ ಸಾವಿರಾರು ಜನ ರಸ್ತೆ ಗುಂಡಿಗಳಿಗೆ ಬಲಿಯಾಗುತ್ತಿದ್ದಾರೆ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ 100 ದಿನ ಕಳೆದಿದೆ. ನಿಮ್ಮ ಆಡಳಿತದಲ್ಲಾದರೂ ಹಳ್ಳಿ, ಹೋಬಳಿ, ತಾಲೂಕು, ನಗರಗಳಲ್ಲಿನ ರಸ್ತೆಗಳ ಗುಂಡಿ ಮುಚ್ಚುವ ಕಾರ್ಯಕ್ಕೆ ಒತ್ತು ನೀಡಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ರಾಜ್ಯಪಾಲರಿಗೂ ಈ ಬಗ್ಗೆ ದೂರು ನೀಡಿ, ಸರ್ಕಾರದ ವಿರುದ್ಧ ಹೈಕೋರ್ಟ್‌ನಲ್ಲಿ ಪಿಐಎಲ್ ಕೇಸು ದಾಖಲು ಮಾಡಲಾಗುವುದು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ರಂಗದ ಸದಸ್ಯ ಹರೀಶ್ ಇದ್ದರು.

# ಬಿಜೆಪಿ ಪ್ರತಿಭಟನೆ ಇಂದು

ಹರಿಹರ: ಸೆ.8ರಂದು ನಗರದ ಪಶು ಆಸ್ಪತ್ರೆ ಲೋಕಾರ್ಪಣೆಗೆ ಆಗಮಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಶಾಸಕ ಬಿ.ಪಿ.ಹರೀಶ್ ಅವರ ವಿರುದ್ಧ ಅಸಂವಿಧಾನಾತ್ಮಕ ಪದಗಳಿಂದ ನಿಂದಿಸಿದ್ದನ್ನು ಖಂಡಿಸಿ ಬಿಜೆಪಿಯಿಂದ ನಗರದಲ್ಲಿ ಸೆ.12 ರಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಇಂದು ಬೆಳಿಗ್ಗೆ 11ಕ್ಕೆ ಶಿವಮೊಗ್ಗ ರಸ್ತೆಯ ಪಕ್ಷದ ಕಚೇರಿಯಿಂದ ಗಾಂಧಿ ಸರ್ಕಲ್‌ವರೆಗೆ ಮೆರವಣಿಗೆ ನಡೆಸಿ ಪ್ರತಿಭಟನೆ ವ್ಯಕ್ತಪಡಿಸಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಗಿರೀಶ್.ಕೆ.ಬಿ. ಹಾಗೂ ಸಂತೋಷ ಗುಡಿಮನಿ ಪ್ರಕಟಣೆಯಲ್ಲಿ ಕೋರಿದ್ದಾರೆ.

**ಹೆಸರು ಸ್ಪಷ್ಟೀಕರಣ**

ನಾನು ಶ್ರೀಯುತ ಶಾನವಾಜ ರಟ್ಟಿಹಳ್ಳಿ, ತಂದೆ : ಮಹೆಬೂಬ ಅಲಿ ವಯಾ : ಮೇಜರ್, ವಾಸ: ಸಾ|| ವರಕರ ಓಣಿ, ರಾಣೇಬೆನ್ನೂರ-581115 ಜಿ|| ಹಾವೇರಿ ವಾಸಿಯಾದ ನಾನು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳುವುದೇನೆಂದರೆ, ದಿನಾಂಕ 09-08-2024 ರಂದು ಪಡೆದ ನನ್ನ ಮಗನ ಜನನ ಪ್ರಮಾಣ ಪತ್ರ ರೆಜಿಸ್ಟ್ರೇಷನ್ ನಂ: **803127/T/B/2024/007704** ರಲ್ಲಿ ಮಗನ ಹೆಸರು **ಮೊಹಮ್ಮದ್ ಹಸ್ಸಾನ್ ರಾಜಾ (MOHAMMED HASSAN RAZA)** ಎಂದು ತಪ್ಪಾಗಿ ನಮೂದಾಗಿರುತ್ತದೆ. ಆದ್ದರಿಂದ ನನ್ನ ಮಗನ ಹೆಸರನ್ನು **ಮೊಹಮ್ಮದ್ ಹಸ್ಸಾನ್ ರಜಾ ರಟ್ಟಿಹಳ್ಳಿ (MOHAMMED HASSAN RAZA RATTIHALLI)** ಎಂದು ತಿದ್ದುಪಡಿ ಮಾಡಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಪ್ರಮಾಣ ಪತ್ರವನ್ನು ಹಾಜರು ಪಡಿಸಲು ದಿನಾಂಕ 31-07-2026 ರಂದು ರಾಣೇಬೆನ್ನೂರು ನೋಟರಿ ಕುಮಾರ ಡಿ ಮಡಿವಾಲರ ಅವರ ಬಳಿ ಮೇಲೆ ತಿಳಿಸಿದ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣ ಪತ್ರ ಮಾಡಿಸಿರುತ್ತೇನೆ.

- ಶ್ರೀಯುತ ಶಾನವಾಜ ರಟ್ಟಿಹಳ್ಳಿ

**CHANGE OF NAME**

I, **Syed Abubakar Siddiq Karur** (Old Name) R/o # 445/2, Behind New Maszid, Pinzar Galli, Davanagere - 577001, Karnataka. I have changed my name as **Syed Abubakar Siddiq** (New Name) vide affidavit on 11-9-2026 sworn before Notary B. Lingaraj, Davanagere. In future all my dealings & transactions will be in my new name.

Sd/- **Syed Abubakar Siddiq**









ದಾವಣಗೆರೆ ಉತ್ತರ ಮತ್ತು ದಕ್ಷಿಣ ವಿಧಾನಸಭಾ ಕ್ಷೇತ್ರದ
ನಗರ ಮತ್ತು ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳ

**ಭೂಮಿಪೂಜೆ ಸಮಾರಂಭ**

**ದಿನಾಂಕ : 12.09.2026ರ ಶನಿವಾರ**

ಭೂಮಿಪೂಜೆ : **ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್**
ಮಾನ್ಯ ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರು ಹಾಗೂ ದಾವಣಗೆರೆ ಜಿಲ್ಲೆ ಉಸ್ತುವಾರಿ ಸಚಿವರು ಇವರಿಂದ

ಅಧ್ಯಕ್ಷತೆ: **ಸನ್ಮಾನ್ಯ ಶ್ರೀ ಸಮರ್ಥ್ ಶಾಮನೂರು**
ಮಾನ್ಯ ಶಾಸಕರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ

ಘನ ಉಪಸ್ಥಿತಿ: **ಸನ್ಮಾನ್ಯ ಶ್ರೀಮತಿ ಡಾ|| ಪ್ರಭಾ ಮಲ್ಲಿಕಾರ್ಜುನ್ ರವರು**
ಮಾನ್ಯ ಸಂಸದರು, ದಾವಣಗೆರೆ ಲೋಕಸಭಾ ಕ್ಷೇತ್ರ

| ಕಾಮಗಾರಿಗಳ ವಿವರ | ಸ್ಥಳ ಮತ್ತು ಸಮಯ |
| --- | --- |
| ಸಿ.ಎಂ.ಐ.ಡಿ.ಪಿ. ಯೋಜನೆಯಡಿ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ. 23ರ ನಿಜಲಿಂಗಪ್ಪ ಬಡಾವಣೆ, 1ನೇ ಮೇನ್ 10ನೇ ಕ್ರಾಸ್‌ನಿಂದ (ಅಮೃತಾ ವಿದ್ಯಾಲಯ ಶಾಲೆಯಿಂದ) 2ನೇ ಕ್ರಾಸ್‌ವರೆಗೆ ಸಿ.ಸಿ. ರಸ್ತೆ, ಸಿ.ಸಿ. ಚರಂಡಿ ಹಾಗೂ ಎಂ.ಸಿ.ಸಿ. ಎ ಬ್ಲಾಕ್ 8ನೇ ಮುಖ್ಯರಸ್ತೆ ಎಡಭಾಗದಲ್ಲಿ ಮತ್ತು ನಿಜಲಿಂಗಪ್ಪ ಬಡಾವಣೆ 'ಎ' ಬ್ಲಾಕ್ ಕಾಂಟಿನೆಂಟಲ್ ಟೈರ್ ಅಂಗಡಿಯಿಂದ ಎಸ್.ಬಿ.ಐ. ಇನ್ಫೆಫ್ ಬ್ಯಾಂಕ್‌ವರೆಗೆ ಸಿ.ಸಿ. ರಸ್ತೆ ಅಭಿವೃದ್ಧಿ ಕಾಮಗಾರಿ. (ಅಂದಾಜು ಮೊತ್ತ ರೂ. 160.00 ಲಕ್ಷಗಳು) | ನಿಜಲಿಂಗಪ್ಪ ಬಡಾವಣೆಯ 1ನೇ ಮುಖ್ಯ ರಸ್ತೆ, 2ನೇ ಅಡ್ಡರಸ್ತೆ, ಅಂಗನವಾಡಿ ಕೇಂದ್ರದ ಹತ್ತಿರ ಸಮಯ : ಸಂಜೆ 6 ಗಂಟೆಗೆ |
| ಸಿ.ಎಂ.ಐ.ಡಿ.ಪಿ. ಯೋಜನೆಯಡಿ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಿರಮಗೊಂಡನಹಳ್ಳಿ ಗ್ರಾಮದಿಂದ ದಾವಣಗೆರೆ ನಗರದ ಎನ್.ಹೆಚ್. - 48 ಸರ್ವೀಸ್ ರಸ್ತೆಯವರೆಗೆ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿ. (ಅಂದಾಜು ಮೊತ್ತ ರೂ.1000.00 ಲಕ್ಷಗಳು) | ಶಿವಬಸವ ಬಡಾವಣೆ ಪಕ್ಕದ ಸೇತುವೆ ಬಳಿ ಸಮಯ : ಸಂಜೆ 6:15 ಗಂಟೆಗೆ |
| ಸಿ.ಎಂ.ಐ.ಡಿ.ಪಿ. ಯೋಜನೆಯಡಿ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ನಾಗನೂರು ಹತ್ತಿರದಿಂದ ಹೊಸಬಿಸಲೇರಿವರೆಗೆ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿ. (ಅಂದಾಜು ಮೊತ್ತ ರೂ. 450.00 ಲಕ್ಷಗಳು) | ಹೊಸಬಿಸಲೇರಿ ರಸ್ತೆ ಮತ್ತು ನಾಗನೂರು ಗ್ರಾಮದ ಕೂಡುವ ಸ್ಥಳ. ಸಮಯ : ಸಂಜೆ 6.30 ಗಂಟೆಗೆ |

ಈ ಭೂಮಿ ಪೂಜೆ ಸಮಾರಂಭಗಳಿಗೆ ಆಗಮಿಸುತ್ತಿರುವ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು, ಸದಸ್ಯರುಗಳು, ಆಯುಕ್ತರು ಹಾಗೂ ಸಿಬ್ಬಂದಿ ವರ್ಗ, ದಾವಣಗೆರೆ ಮಹಾನಗರ ಪಾಲಿಕೆಯ ಮಾಜಿ ಮಹಾಪೌರರು, ಮಾಜಿ ಉಪಮಹಾಪೌರರು, ಆಯುಕ್ತರು, ಮಾಜಿ ಸದಸ್ಯರುಗಳು ದಾವಣಗೆರೆ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್ ಮತ್ತು ಎಪಿಎಂಸಿಯ ಮಾಜಿ ಸದಸ್ಯರುಗಳಿಗೂ ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರುಗಳಿಗೂ, ಕಾರ್ಯಕರ್ತರಿಗೂ ಹೃದಯಪೂರ್ವಕ ಸುಸ್ವಾಗತ...

PUBLISHED OWNED AND PRINTED BY : C.K. JAYANTH, SHANTI ROYAL (HOTEL SHANTI PARK), ASHOKA / P.B.ROAD, DAVANGERE, DAVANAGERE DISTRICT, KARNATAKA, EDITOR: C.K. JAYANTH, 3RD MAIN, P.J. EXTN.,DAVANGERE.